ಬೆಲೆ ರೂ.2.50
D.O.P - 15th of every month at Udupi Head Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844

ಸಂಪುಟ-24 ಸಂಚಿಕೆ-6 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

### ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಗಳಿಂದ

## ತಿತ್ವಾಲ್‌ನಲ್ಲಿ ಶ್ರೀ ಶಾರದಾಂಬೆಯ ಪ್ರಾಣಪ್ರತಿಷ್ಠೆ





ಏಳೂವರೆ ದಶಕಗಳ ಬಳಿಕ ದೇಶದ ಗಡಿ ಭಾಗದ ಕಾಶ್ಮೀರದ ಕುಪ್ವಾರಾ ಜಿಲ್ಲೆಯ ತಿತ್ವಾಲ್‌ನಲ್ಲಿ ಶ್ರೀ ಶಾರದಾಂಬೆಯ ವಿಗ್ರಹದ ಪ್ರಾಣಪ್ರತಿಷ್ಠಾ ಕಾರ್ಯವನ್ನು ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರು ತಾ.5.6.2023 ಸೋಮವಾರ ಧಾರ್ಮಿಕ ವಿಧಿವಿಧಾನಗಳ ಮೂಲಕ ಅದ್ದೂರಿಯಾಗಿ ನೆರವೇರಿಸಿದರು.

ಶ್ರೀ ಶಾರದಾ ದೇಗುಲದ ಶ್ರೀ ಶಾರದಾಂಬೆಯ ಪ್ರತಿಷ್ಠೆ ಹಾಗೂ ಕುಂಬಾಭಿಷೇಕಗಳ ಅಂಗವಾಗಿ ತಾ.4.6.2023 ರವಿವಾರ ಮತ್ತು 5.6.2023 ಸೋಮವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸೋಮವಾರ ಬೆಳಿಗ್ಗೆ ಪಂಚಲೋಹದ ಶ್ರೀ ಶಾರದೆಯ ವಿಗ್ರಹಕ್ಕೆ ಕಲ್ಪೋಕ್ತ ಪೂಜೆ, ಪಂಚಾಮೃತಾಭಿಷೇಕ, ಪುರುಷ ಸೂಕ್ತ ಹಾಗೂ ಶ್ರೀ ಸೂಕ್ತ ರುದ್ರಾಭಿಷೇಕ ನೆರವೇರಿಸಲಾಯಿತು. ಅನಂತರ ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಜರಗಿತು. ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳು ಶ್ರೀ ಶಾರದಾ ಪೀಠದ ಆರಾಧ್ಯ ದೈವ ಶ್ರೀಚಕ್ರ ಯಂತ್ರ ಸ್ಥಾಪನೆ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ಕಲಶ ಪೂಜೆಯೊಂದಿಗೆ ಜಗದ್ಗುರುಗಳು ಕುಂಭಾಭಿಷೇಕ ನೆರವೇರಿಸಿದರು.

ರವಿವಾರ ರಾತ್ರಿ ವಾಸ್ತುಹೋಮ, ಕಲಾಹೋಮ, ರಾಕ್ಷೋಘ್ನ ಹೋಮಾದಿಗಳು ನಡೆದವು. ಶ್ರೀಮಠದ ಪುರೋಹಿತರಾದ ಡಾ। ಶಿವಕುಮಾರ ಶರ್ಮ, ತಂತ್ರಿಗಳವರಾದ ಸೀತಾರಾಮ ಶರ್ಮ ಇವರ ನೇತೃತ್ವದ ತಂಡದಿಂದ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ಶ್ರೀಗಳು ದೇವಸ್ಥಾನದ ಸಮುಚ್ಚಯದಲ್ಲಿ ಪಾರಿಜಾತ ಹಾಗೂ ಬಿಲ್ವಪತ್ರೆ ಗಿಡವನ್ನು ನೆಟ್ಟರು. ಸೇವ್ ಶಾರದಾ ಕಮಿಟಿ ಅಧ್ಯಕ್ಷ ರವೀಂದ್ರ ಪಂಡಿತ್, ಶ್ರೀಮಠದ ಆಡಳಿತಾಧಿಕಾರಿ ಡಾ। ವಿ.ಆರ್.ಗೌರಿಶಂಕರ್ ಹಾಗೂ ಕಾಶ್ಮೀರಿ ಪಂಡಿತರು ಉಪಸ್ಥಿತರಿದ್ದರು. ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ರವಿವಾರ ಜಗದ್ಗುರುಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಕಳೆದ ಮಾರ್ಚ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ದೇಗುಲದ ಪ್ರಾಂಗಣವನ್ನು ಉದ್ಘಾಟಿಸಿದ್ದರು.

ಕಾಶ್ಮೀರದ ಗಡಿಪ್ರದೇಶವಾಗಿದ್ದುದರಿಂದ ಸೇನಾ ಪಡೆಗಳ ಗಸ್ತು ಹಾಗೂ ವಿಶೇಷ ಬಂದೋಬಸ್ತ್ ಮಾಡಲಾಗಿತ್ತು. ವಾಹನಗಳ ತಪಾಸಣೆ, ವಿಶೇಷ ಸುರಕ್ಷಾಕ್ರಮ ಕೈಗೊಳ್ಳಲಾಗಿತ್ತು. ಇದೇ ವೇಳೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶ್ರೀಮಠದ ಆಡಳಿತಾಧಿಕಾರಿ ಡಾ। ವಿ.ಆರ್. ಗೌರಿಶಂಕರ್, ಸೇವ್ ಶಾರದಾ ಕಮಿಟಿ ಅಧ್ಯಕ್ಷ ರವೀಂದ್ರ ಪಂಡಿತ್ ಸೇರಿ ಗಣ್ಯರು ದಕ್ಷಿಣ ಭಾರತದ ಕನ್ಯಾಕುಮಾರಿ, ಶೃಂಗೇರಿ ಹಾಗೂ ಶಂಕರಾಚಾರ್ಯರ ಜನ್ಮಸ್ಥಳ ಕಾಲಡಿಯಿಂದ ತಂದಿದ್ದ ಸಸಿಗಳನ್ನು ನೆಟ್ಟರು. ಶೃಂಗೇರಿ ತಿತ್ವಾಲ್‌ನ ಶಾರದಾ ದೇಗುಲದಲ್ಲಿ ಪ್ರತಿಷ್ಠಾ ಹೋಮ ನಡೆಯಿತು.


ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಶ್ರೀ ಶಾರದಾ ಮಂಟಪದಲ್ಲಿ ಸುಗಮ ಸಂಗೀತ



ತಾ.29.04.2023ರಂದು ಶ್ರೀ ಶಾರದಾ ಮಂಟಪದ ಹವಾ ನಿಯಂತ್ರಿತ ಸಭಾಂಗಣದ ಉದ್ಘಾಟನೆಗೆ ಪೂರ್ವಭಾವಿಯಾಗಿ ಸುಗಮ ಸಂಗೀತ ಕಾರ್ಯಕ್ರಮ ಆಯೋಜನೆಗೊಂಡಿತ್ತು. ಈ ಕಾರ್ಯಕ್ರಮವನ್ನು ಶಾರದಾ ಮಹಿಳಾ ಮಂಡಳಿಯ ಸದಸ್ಯೆಯರಾದ ಶ್ರೀಮತಿ ಜ್ಞಾನೇಶ್ವರಿ, ಸುಮಿತ್ರಾ ರಾವ್ ಚಿಟ್ಪಾಡಿ, ಜಯಲಕ್ಷ್ಮೀ ರಾವ್, ಹರಿಣಿ ರಾವ್, ಸುನಂದಾ ಸಿ.ಎಸ್.ರಾವ್ ಶಾರದೆಗೆ ಪುಷ್ಪಾರ್ಚನೆ ಮಾಡಿ ಪ್ರಾರಂಭಿಸಿದರು. ಈ ಸಂಗೀತ ಕಾರ್ಯಕ್ರಮವು ನಮ್ಮ ಸಮಾಜದ ಹಿರಿಯ ಕಿರಿಯ ಕಲಾವಿದರಿಂದ ಸಮ್ಮಿಳಿತಗೊಂಡು ಅತ್ಯದ್ಭುತವಾಗಿ ಮೂಡಿಬಂತು. ಇದರಲ್ಲಿ ಸಂಗೀತ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆಗೈದ ಶ್ರೀ ಪ್ರಕಾಶ್‌ರವರು ಕೀಬೋರ್ಡ್‌ನಲ್ಲಿ ಸಹಕರಿಸಿದರು. ತಬಲಾದಲ್ಲಿ ವೀಕ್ಷಿತ್ ಕೊಡಂಚ, ರಿದಂಪ್ಯಾಡ್‌ನಲ್ಲಿ ಶ್ರೀ ಸುದರ್ಶನ್ ಹಾಗೂ ಶ್ರೀ ಮುರಳಿಯವರು ಕೊಳಲು ವಾದನದಲ್ಲಿ ಸಹಕರಿಸಿದರು. ಗಾಯನದಲ್ಲಿ ಡಾಕ್ಟರ್ ವಿಜಯ ರಾವ್, ಡಾಕ್ಟರ್ ವಿದ್ಯಾ ಎಸ್.ರಾವ್, ಕುಮಾರಿ ಶರಣ್ಯ ಹಾಗೂ ಮಾಸ್ಟರ್ ಪರ್ಜನ್ಯ ಅವರು ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮವನ್ನು ಡಾ. ವಿದ್ಯಾರಾವ್ ಹಾಗೂ ಶ್ರೀಮತಿ ಸುಮನರವರು ಅಚ್ಚುಕಟ್ಟಾಗಿ ನಿರೂಪಿಸಿರುತ್ತಾರೆ.



### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | |
|---|---|
| 58. ಶ್ರೀ ಸಿ.ಎಸ್. ರಾವ್, ಉಡುಪಿ | 1,00,000/– |
| 59. ಡಾ। ಶರತ್‌ಕುಮಾರ್ ರಾವ್, ಮಣಿಪಾಲ | 1,00,000/– |
| 60. ಶ್ರೀ ಸುಧೀರ ಶಾಸ್ತ್ರೀ, ಬೆಂಗಳೂರು | 2,00,000/– |
| 61. ಬೆಳ್ಳೆ ಸುದರ್ಶನ್ ಸುರೇಂದ್ರ ರಾವ್, ಬೆಂಗಳೂರು | 25,001/– |
| 62. ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ | 1,00,000/– |
| 63. ಶ್ರೀ ಕೆ.ವಿ. ರಾವ್, ಪಲಿಮಾರು | 1,00,000/– |
| 64. ಶ್ರೀ ಪ್ರತೀಕ್ ಪಿ. ರಾವ್, ಉಡುಪಿ | 1,00,000/– |
| 65. ಶ್ರೀ ಕೆ.ಆರ್. ಉಪಾಧ್ಯಾಯ, ಮಂಗಳೂರು | 25,000/– |
| 66. ಶ್ರೀ ಎನ್. ಪದ್ಮನಾಭ ರಾವ್, ಬೆಂಗಳೂರು | 25,000/– |
| 67. ಯು. ವಸಂತ ರಾವ್, ಬೆಂಗಳೂರು | 25,000/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.


ವಾಗೀಶ ಎಸ್. ಶಾಸ್ತ್ರೀ, ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★
ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಶತದಳ ಪದ್ಮ

ವೈ.ಮೋಹನ್ ರಾವ್




ಹರಿಕಥಾ ವಿದುಷಿ 'ಬಾಲಭಾರತಿ' ಶ್ರೀಮತಿ ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಜನ್ಮ ಶತಮಾನೋತ್ಸವ ಸಂಸ್ಮರಣೆ.

ಶ್ರೀ ಧರ್ಮಸ್ಥಳ, ಧರ್ಮಾಧಿಕಾರಿ ಶ್ರೀ ಡಿ.ವೀರೇಂದ್ರ ಹೆಗ್ಗಡೆಯವರು ನೀಡಿದ ಸಂದೇಶ –

ಬಾಲಭಾರತಿ ಹರಿಕೀರ್ತನಾ ವಿದುಷಿ ಮಾರ್ಪಳ್ಳಿ ಪದ್ಮಾವತಿ ಎಸ್. ರಾವ್ ಅವರ ಜನ್ಮ ಶತಮಾನೋತ್ಸವ (1923–2023) ಆಚರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು.

'ಬಾಲಭಾರತಿ' ಬಿರುದಾಂಕಿತರಾಗಿದ್ದ ಅವರು ಖ್ಯಾತ ಹರಿಕಥಾ ವಿದುಷಿಯಾಗಿದ್ದು ನಾಡಿನೆಲ್ಲೆಡೆ ಹರಿಕಥಾ ಕಾರ್ಯಕ್ರಮದ ಮೂಲಕ ಚಿರಪರಿಚಿತರಾಗಿದ್ದರು. ಒಂಭತ್ತು ವರ್ಷದ ಬಾಲಕಿಯಾಗಿದ್ದಾಗಲೇ ಅವರು 'ಹರಿಕಥೆ'ಯನ್ನು ಪ್ರಾರಂಭಿಸಿ ಶ್ರೋತೃಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಧರ್ಮಸ್ಥಳದ ಅಭಿಮಾನಿ ಭಕ್ತರೂ ಆಗಿದ್ದ ಅವರು ಅನೇಕ ಸಂದರ್ಭಗಳಲ್ಲಿ ಇಲ್ಲಿಯೂ 'ಹರಿಕಥಾ' ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಅವರ ಕಲಾ ಪ್ರತಿಭೆಯನ್ನು ಮನ್ನಿಸಿ ರಾಜ್ಯ ಸರಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದು ಅವರ ಕಲಾಸೇವೆಗೆ ಸಂದ ಗೌರವವಾಗಿದೆ.

ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನಂ ಶ್ರೀ ಸಂಪುಟ ನರಸಿಂಹಸ್ವಾಮಿ ಶ್ರೀ ಸುಬ್ರಹ್ಮಣ್ಯ ಮಠ, ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ಶ್ರೀ ಶ್ರೀ ಸಚ್ಚಿದಾನಂದ ಭಾರತಿ ಶ್ರೀಪಾದಂಗಳವರು ಎಡನೀರು ಸಂಸ್ಥಾನ, ಎಡನೀರು ಮಠ, ಕಾಸರಗೋಡು, ಕೇರಳ ಮತ್ತು ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ



ಮಹಾಸಂಸ್ಥಾನಂ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ ಇವರ ಪರವಾಗಿ ಶ್ರೀ ವಿ.ಆರ್. ಗೌರಿಶಂಕರ ಇವರು ಆಶೀರ್ವಚನ ಮಾಡಿದ್ದಾರೆ.

ಗ್ರಂಥದ ಸಂಪಾದಕರಲ್ಲೊಬ್ಬರಾದ ವಿಜಯಲಕ್ಷ್ಮಿ ಬಿ. ರಾವ್ ಗ್ರಂಥದ ಲೇಖನದಲ್ಲಿ ತಿಳಿಸುತ್ತಾರೆ–

ನನ್ನ ತಾಯಿಯ ಜನ್ಮ ಶತಾಬ್ಧಿಯ ಈ ಸುಸಂದರ್ಭದಲ್ಲಿ ಅವಳ ಪ್ರತಿಭೆಯನ್ನು ಗುರುತಿಸಿ ಭಾರತ ಸರಕಾರದ ಅಂಚೆ ಇಲಾಖೆಯು ವಿಶೇಷ ಅಂಚೆ ಲಕೋಟೆಯನ್ನು ಹಾಗೂ ಮೈ ಸ್ಟಾಂಪ್ ಅಂಚೆ ಚೀಟಿಯನ್ನು ಹೊರತರುವುದು ಹಾಗೂ ನಮ್ಮ ಅಜ್ಜ ತಾಳೆಪ್ಪಾಡಿ ಸೀತಾರಾಮಯ್ಯ ಹಾಗೂ ಅಜ್ಜಿ ಗೋಪಮ್ಮ ಮತ್ತು ನನ್ನ ತಾಯಿ–ತಂದೆ ನಡೆದು ಓಡಾಡಿದ ನಮ್ಮ ತಾಯಿಯವರ ಮನೆಯ ಎದುರಿನ ರಸ್ತೆಗೆ 'ಮಾತೃಶ್ರೀ–ಹರಿಕೀರ್ತನಾ ವಿದುಷಿ ಎಂ. ಪದ್ಮಾವತಿ ಎಸ್. ರಾವ್ ಮಾರ್ಗ' ಎಂದು ನಾಮಕರಣ ಮಾಡುತ್ತಿರುವುದು ನನ್ನ ಎಲ್ಲ ಸಹೋದರರು, ಸಹೋದರಿಯರು ಹಾಗೂ ಮೊಮ್ಮಕ್ಕಳಿಗೂ ಸಂತೋಷ ತಂದಿದೆ.

"ಹಳೆಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು" ಎಂಬ ನಾಣ್ನುಡಿಯಂತೆ ನಮ್ಮ ಪೂಜ್ಯ ಮಾತೃಶ್ರೀಯವರಾದ ಬಾಲಭಾರತಿ ಹರಿಕೀರ್ತನಾ ವಿದುಷಿ ಎಂ. ಪದ್ಮಾವತಿ ಎಸ್. ರಾವ್ ಅವರ ಸಿದ್ಧಿ ಸಾಧನೆ ಬದುಕಿನ ಸಂಸ್ಮರಣಾ ಗ್ರಂಥ 'ಶತದಳ ಪದ್ಮ' ಪುಸ್ತಕ ರೂಪದಲ್ಲಿ ಲೋಕಾರ್ಪಣೆಗೊಳಿಸುವುದು ಮುಂದಿನ ಪೀಳಿಗೆಯವರಿಗೆ ಪ್ರೇರಣೆ ಹಾಗೂ ಮಾದರಿಯಾಗಲಿ. ಹರಿಕಥಾ ಕ್ಷೇತ್ರದಲ್ಲಿ ಸಾಧನೆ ಮಾಡಲಿ ಎಂದು ನಮ್ಮೆಲ್ಲರ ಹಾರೈಕೆ.

ಗ್ರಂಥದ ಸಂಪಾದಕರಲ್ಲೊಬ್ಬರಾದ ನಂದಳಿಕೆ ಬಾಲಚಂದ್ರ ರಾವ್ ಗ್ರಂಥದ ಲೇಖನದಲ್ಲಿ ತಿಳಿಸುತ್ತಾರೆ–

ನನ್ನ ಅತ್ತೆಯವರು 'ಕೆಲಸೊಂಟು ನಿಷ್ಠೆ ಬುಡೊತ್ರಿ' ಎಂದು ಪ್ರತಿಬಾರಿಯೂ ಹೇಳುತ್ತಿದ್ದರು. ನಂದಳಿಕೆಯಲ್ಲಿ ಮುದ್ದಣನ ಹೆಸರು ಉಳಿಸುವ ನನ್ನ ಕಿಂಚಿತ್ ಕೆಲಸವೂ ಸೇರಿದಂತೆ ಅನೇಕ ಸಮಾಜಸೇವಾ ಕೆಲಸಗಳ ಹಿಂದೆ ನನ್ನ ಅತ್ತೆಯವರ ಪ್ರೇರಣೆ ಇದ್ದೇ

(3ನೇ ಪುಟಕ್ಕೆ...)

## ಶ್ರೀ ಕೃಷ್ಣರಾಜ ರಾವ್ ಇವರಿಗೆ ಪ್ರಶಸ್ತಿ



ಶೃಂಗೇರಿ ಸುರಸರಸ್ವತೀ ಸಭಾ (ಶ್ರೀ ಶೃಂಗೇರಿ ಶಾರದಾ ಪೀಠದ ಒಂದು ಉಪಕ್ರಮ) ದವರು ನಡೆಸಿದ ದ್ವಿತೀಯ ಸಂಸ್ಕೃತ ಪರೀಕ್ಷೆಯಲ್ಲಿ ಶ್ರೀ ಕೃಷ್ಣರಾಜ ರಾವ್ ಅವರು 100 ರಲ್ಲಿ 99 ಅಂಕಗಳನ್ನು ಗಳಿಸಿ ತೇರ್ಗಡೆಯಾಗಿ ಜಗದ್ಗುರುಗಳಿಂದ ಅನುಗ್ರಹಿಸಲ್ಪಟ್ಟು ಬೆಳ್ಳಿಯ ಪಾರಿತೋಷಕ ಪಡೆದಿದ್ದಾರೆ. ಶ್ರೀಯುತರು ಮೂಲತಃ ಪೆರ್ಡೂರಿನವರಾಗಿದ್ದು, ಕಾರ್ಪೋರೇಶನ್ ಬ್ಯಾಂಕ್‌ನಲ್ಲಿ DGM ಆಗಿ ನಿವೃತ್ತಿ ಹೊಂದಿರುತ್ತಾರೆ.

## ಕನ್ನಡ ಸಂಘದ ಕಾರ್ಯದರ್ಶಿಯಾಗಿ ಆಯ್ಕೆ



ಶ್ರೀ ಸುದೀಪ್ ಇವರು ಸಿಂಗಾಪುರದ ಕನ್ನಡ ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ. ಇವರು ಈ ಸಂಘದಲ್ಲಿ ಕಳೆದ 5 ವರ್ಷಗಳಿಂದ ಖಜಾಂಚಿಯಾಗಿದ್ದರು. ಇವರು ಸಿಂಗಾಪುರದ 'ANZ' ಬ್ಯಾಂಕಿನ ಉದ್ಯೋಗಿಯಾಗಿರುತ್ತಾರೆ. ಇವರು ಪರ್ಕಳದಲ್ಲಿರುವ ರಾಮಚಂದ್ರ ಕೊಟ್ಟಾರಿ ಮತ್ತು ಶ್ರೀಮತಿ ಜ್ಞಾನೇಶ್ವರಿಯವರ ಪುತ್ರರಾಗಿರುತ್ತಾರೆ. ಇವರಿಗೆ 'ಶ್ರೀ ಶಾರದಾ ಶುಭ ಕಾಮನೆಗಳು'.

## ನಮ್ಮ ಸಮಾಜದ ಅರಳು ಪ್ರತಿಭೆ ಪರ್ಜನ್ಯ ಕೆ.ರಾವ್



ನಮ್ಮ ಸಮಾಜದ ಅರಳು ಪ್ರತಿಭೆ ಸಂಗೀತ ಕ್ಷೇತ್ರದಲ್ಲಿ ಸಾಧನೆಯ ಹೆಜ್ಜೆಯನ್ನಿಡುತ್ತಿರುವ ಪ್ರತಿಭಾವಂತ ಪರ್ಜನ್ಯ ಕೆ.ರಾವ್. ಕುಕ್ಕಿಕಟ್ಟೆಯ ಭರತ್ ಕುಮಾರ್ ಹಾಗೂ ಸುಮನಾ ಭರತ್ ದಂಪತಿಗಳ ಪುತ್ರ. ಉಡುಪಿಯ ಹೆಸರಾಂತ ಸಂಗೀತ ಗುರುಗಳಾದ ವಿದುಷಿ ಡಾ. ಚೇತನಾ ಆಚಾರ್ಯ ಅವರಲ್ಲಿ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿರುವ ಪರ್ಜನ್ಯ ವಿದ್ಯೋದಯ ಶಿಕ್ಷಣ ಸಂಸ್ಥೆಯಲ್ಲಿ ಆರನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ.

Malaysia International Carnatic Music Festival ನಲ್ಲಿ ನಡೆದ ಭಕ್ತಿ ಸಂಗೀತ ಸ್ಪರ್ಧೆ ಹಾಗೂ ISKCON Vedic Cultural Contest ಇವರು ಆಯೋಜಿಸಿದ ಶಾಸ್ತ್ರೀಯ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ಗುರುತಿಸಿಕೊಂಡಿದ್ದು, ಹಲವಾರು ಸ್ಥಳೀಯ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಬಹುಮಾನ ಪಡೆದಿದ್ದಾನೆ.

ಗುರುಗಳಾದ ರಜತ್ ಮಯ್ಯ ಉಜಿರೆ ಇವರ ಮಾರ್ಗದರ್ಶನದಲ್ಲಿ ಸುಗಮ ಸಂಗೀತ ಅಭ್ಯಾಸ ಮಾಡುತ್ತಿದ್ದು, Voice of Kapu, Voice of Hebri ಹಾಗೂ ಕುಂದಸಿರಿ–ಗಾನಸಿರಿ–2022 ಕರೋಕೆ ಗಾಯನ ಸ್ಪರ್ಧೆಗಳಲ್ಲಿ ವಿಜೇತನಾಗಿದ್ದಾನೆ. ಇತ್ತೀಚೆಗೆ ನಡೆದ ಕರಾವಳಿ ಕರ್ನಾಟಕದ TV reality show "ಹಾಡು ನೀ ಹಾಡು" ಇದರಲ್ಲಿ ದ್ವಿತೀಯ ಬಹುಮಾನ ಪಡೆದಿದ್ದು, "ಡೈಜಿವರ್ಲ್ಡ್ ಸಂಗೀತ ತಾರೆ" TV show ನಲ್ಲಿ ಅಂತಿಮ ಸುತ್ತಿಗೆ ಆಯ್ಕೆಯಾದ ಅತಿ ಕಿರಿಯ ಸ್ಪರ್ಧಿಯಾಗಿದ್ದಾನೆ.

ಶ್ರೀ ಕೃಷ್ಣಾನುಗ್ರಹ ಹಾಗೂ ಗುರುಗಳ ಆಶೀರ್ವಾದದೊಂದಿಗೆ, ಕೃಷ್ಣ ಮಠದಲ್ಲಿ ರಾಮನವಮಿಯ ದಿನ ತನ್ನ ಚೊಚ್ಚಲ ಸಂಗೀತ ಸೇವೆ–"ದಾಸ ವಾಣಿ"–ಪ್ರಸ್ತುತ ಪಡಿಸಿ ಭಕ್ತರ ಮನರಂಜಿಸಿದ್ದಾನೆ. ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ "ಹಂಸಿಕ ಮೆಲೊಡಿಸ್" ತಂಡದ 'ಗಾನಸುಧೆ' ಹಾಗೂ ಶ್ರೀ ಶಾರದಾ ಮಂಟಪದ AC hall ಉದ್ಘಾಟನೆಯ ಪ್ರಯುಕ್ತ ನಡೆದ 'ಸುಗಮ ಸಂಗೀತ' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾನೆ. ಪರ್ಜನ್ಯನ ಹಾಡುಗಾರಿಕೆ "ಸ್ಪಂದನ TV"ಯ "ನನ್ನ ಪ್ರೀತಿಯ ಹಾಡು" ಹಾಗೂ "ದಾಸ ವಾಣಿ" ಕಾರ್ಯಕ್ರಮದಲ್ಲಿ ಪ್ರಸಾರವಾಗಿದೆ.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com

**JALAJA SKIN CLINIC**
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

## ಶತದಳ ಪದ್ಮ

■...2ನೇ ಪುಟದಿಂದ

ಇದೆ ಎಂದು ನಮ್ರವಾಗಿ ಭಾವಿಸಿದ್ದೇನೆ. ನನಗೆ ಮಗಳು ಹುಟ್ಟಿದಾಗ, ಅತ್ತೆಯವರು ನನ್ನನ್ನು ಮತ್ತೆ ವಿಜಯಲಕ್ಷ್ಮಿಯನ್ನು ಕರೆದು ಕೇಳಿದರು, ‘ಪುದೊರುಜ್ಯಾದೋ ಈ ಜೇಪ’? ಅದು ಪ್ರಶ್ನೆಯಲ್ಲ, ಇಂಥ ಹೆಸರನ್ನೇ ಇಡು ಎಂಬ ಆದೇಶದ ಸೂಕ್ಷ್ಮ ಧ್ವನಿಯೂ ಅದರಲ್ಲಿತ್ತು. ‘ಸೌಜನ್ಯ ಪಂಡ್‌ತ್ ಇಜಿಲ ಅವಾ! ವ್ಯಕ್ತಿಡ ಸೌಜನ್ಯ ಇತ್ತ್‌ಂಡ ಪಾಪು. ಬೆತ್ತ್ ಮಾಂತಲಾ ಸೇರುಂಡು’.

ಗ್ರಂಥದ ಸಂಪಾದಕರಲ್ಲೊಬ್ಬರಾದ ಸೌಜನ್ಯ ರಾವ್ ಗ್ರಂಥದ ಲೇಖನದಲ್ಲಿ ತಿಳಿಸುತ್ತಾರೆ–

ಅಜ್ಜಿ ಹರಿಕಥೆ ಮಾಡುವುದನ್ನು ನಾನು ನನ್ನ ಕಣ್ಣಾರೆ ನೋಡಲಿಲ್ಲವಾದರೂ ನನ್ನ ತಂದೆಯವರು ಸಂಗ್ರಹಿಸಿದ ಅಜ್ಜಿಯ ಭಾವಚಿತ್ರಗಳು, ಅವರ ಪ್ರತಿಭಾ ಲೇಖನಗಳು, ಅಜ್ಜಿಯ ವಿದ್ವತ್ – ಪ್ರತಿಭೆಯನ್ನು ಹಲವು ಕಡೆ ಮಾಡಿದಂತಹ ಹರಿಕಥಾ ಪ್ರಸಂಗದ ಬಗ್ಗೆ ನನ್ನ ತಂದೆ–ತಾಯಿಯವರ ಮೂಲಕ ಕೇಳಿ ತಿಳಿದುಕೊಂಡೆನು. ಹಿರಿಯರು, ವಿದ್ವಂಸರಾದಂತಹ ಅಂಬಾತನಯ ಮುದ್ರಾಡಿ ಮುಂತಾದವರು, ಬಂಧು ಮಿತ್ರರು ಅಜ್ಜಿಯ ಸಾಧನೆಯ ಬಗ್ಗೆ ಹೇಳುವುದನ್ನು ಕೇಳಿ ಪ್ರೇರೇಪಿತನಾದೆನು.

ನೂರರ ಜನ್ಮವಸಂತ ಸಂತಸವ್ ಲೇಖನದಲ್ಲಿ ಶ್ರೀಮತಿ ಪದ್ಮಾವತೀ ಎಸ್. ರಾವ್ ಅವರ ಬಗ್ಗೆ ಮಾರ್ಪಳ್ಳಿ ಗಂಗಾಧರ ರಾವ್ ಸಹೋದರರು ಮತ್ತು ಸಹೋದರಿಯರು ಹಾಗೂ ಮೊಮ್ಮಕ್ಕಳು ಸಾವಿರದ ವಂದನೆಗಳನ್ನು ಹೀಗೆ ಸಲ್ಲಿಸುತ್ತಾರೆ–

*ಅವರ ನೆನಪೆಂಬ ಸವಿಯಮ್ ಕ್ಷೀರ*
*ಪರಮಾನ್ನಮಮ್ ಮೆಲ್ವಂತೆ*
*ಹರಕತೆಯ ಪದ್ಮಮ್ಮ ಹರಿಧಾರೆ ಹರಿಸಿದರು*
*ಹರಿಕೃಪೆಗೆ ಹೆಸರಾಗಿ ಹಸಿರಾದರು ।*
*ಹರಿದ ಹರಿ ಹೆಸರಾಮೃತದಲ್ಲಿ ಹರಿದಾಡಿ*
*ವರುಷ ನೂರರೊಳಾಚೆ ಹೆಸರಾದರು ॥*

ಅಳಿದರೂ ಉಳಿಯುವ ಹೆಸರು ಶ್ರೀಮತಿ ಪದ್ಮಾವತಿ ಅಮ್ಮನವರದ್ದು. ಅವರ ಜನ್ಮ ಶತಮಾನಾಚರಣೆಯ ಸಂದರ್ಭದಲ್ಲಿ – ಹರಿಕಥೆಯಲ್ಲೇ ಪುರಾಣ ಪ್ರಪಂಚವನ್ನು

ಕಟ್ಟುತ್ತಿದ್ದ ಅವರ ಹೃನ್ಮನ ಕಂಪು ಕಥಾನಕ ಕ್ರತು ಶಕ್ತಿಗೆ...

ನಮ್ಮೆಲ್ಲರ ಸಾವಿರದ ವಂದನೆಗಳು.

ಕಲಾ ಸೇವಾ ಸಂತೃಪ್ತಿ : ಬಾಳಿಗೆ ಮಹತ್ವದ ಕೊಡುಗೆ ಲೇಖನದಲ್ಲಿ –

ಬಾಲ್ಯದ ದಿನಗಳಲ್ಲಿ ಹರಿದಾಸಿಯಾಗಿ ದಕ್ಷಿಣ ಭಾರತದ ಉದ್ದಗಲಗಳಲ್ಲೂ ಸೇವೆಗೈದೆ. ಅಂದಿನ ದಿನಗಳ ನೆನಪು ಇನ್ನೂ ಹಸಿರಾಗಿದೆ, ರೋಮಾಂಚನಕಾರಿಯಾಗಿದೆ. ಕಲೆಯ ಎಲ್ಲಾ ಆಯಾಮಗಳನ್ನು ತಲುಪಿದ ಸಂತೃಪ್ತ, ಕೀರ್ತಿಯ ಪರಾಕಾಷ್ಠೆ ಹದಿಹರೆಯದಲ್ಲೇ ನನ್ನ ಮಡಿಲಿಗೆ ಸೇರಿತ್ತು. ಅನಂತರದ ಐದು ಶತಕದ ನನ್ನ ಮೌನ ಈ ಮಾಧ್ಯಮವನ್ನು ತ್ಯಜಿಸುದುದಲ್ಲ. ಸಂತೃಪ್ತಿಯಲ್ಲಿ ಗೈದ ಸೇವೆಯ ಸವಿಯನ್ನು ಮೆಲುಕು ಹಾಕುವಂಥದ್ದೇ ಆಗಿದೆ ಎಂದು ಖ್ಯಾತ ಹರಿಕೀರ್ತನಗಾರ್ತಿ ಪುತ್ತೂರಿನ ಪದ್ಮಾವತಿ ದೇವಿಯವರು ತಮ್ಮ 65ನೇ ವರ್ಷದಲ್ಲಿ ಶಾರದೋತ್ಸವ ಸಂದರ್ಭದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ನಡೆದ ಸನ್ಮಾನ ಸಮಾರಂಭಕ್ಕೆ ಉತ್ತರವಾಗಿ ಹೇಳಿದರು.

ತಮ್ಮ ಹರಿಕಥೆಯ ಮೂಲಕ ಸಮಾಜಕ್ಕೆ ದಿವ್ಯ ಸಂಸ್ಕಾರವಿತ್ತು. ನುಡಿದಂತೆ ನಡೆಯನ್ನು ರೂಪಿಸಿಕೊಂಡು ಬಾಳಿದ ಭವ್ಯ ಪರಂಪರೆಗೆ ಅಡಿಪಾಯ ಹಾಕಿದ ದಿವ್ಯ ಚೇತನವೇ ಹರಿದಾಸಿ ಪದ್ಮಾವತಿಯದ್ದು. ಅವರ ಭಕ್ತಿಯು, ಅವರು ಸಂಸಾರದಲ್ಲಿಟ್ಟ ಅಭಿಮಾನವು ಅವರ ಉಜ್ಜೀವನಕ್ಕೆ ನಾಂದಿಯಾಯಿತು. ನಡೆನುಡಿಯ ನಿಕಟ ಸಂಬಂಧ ಅವರಿಗೆ ದಿವ್ಯ ವ್ಯಕ್ತಿತ್ವವನ್ನು ತಂದಿತು. ಅವರ ಬಾಳನ್ನು ಅಜರಾಮರವಾಗಿರಿಸಿತು. ಅವರ ಹರಿಕಥೆ ಜನರನ್ನು ಮೆಚ್ಚಿಸುವುದಕ್ಕಾಗಿ ಇರಲಿಲ್ಲ.

*ಜನ ಮೆಚ್ಚಿ ನಡೆದರೆ ಏನುಂಟೋ ಜಗದಲಿ*
*ಮನ ಮೆಚ್ಚಿ ನಡೆದರೆ ಹರಿ ಒಲಿವಾ*

ಇದು ಅವರ ಕೀರ್ತನೆಯ ಜಾಡು. ಪದ್ಮಾವತಿ ದೇವಿಯವರು ಜೀವನವನ್ನು ಉಜ್ಜೀವನವಾಗಿಸಿ ಕೊಂಡವರು. (‘ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ’) ಲೇಖನದಲ್ಲಿ ಭದ್ರಗಿರಿ ಅಚ್ಯುತದಾಸ ಸಂತ ಸಂದೇಶ.

ಇತಿಹಾಸದಾಳದ ಮುತ್ತುಗಳು ಎಂಬ ಲೇಖನದಲ್ಲಿ ಡಾ.ಎಂ ಪ್ರಭಾಕರ ಜೋಷಿಯವರು ಹೀಗೆ ಹೇಳುತ್ತಾರೆ–

ಬಾಲಭಾರತಿ ಎಂದೂ, ಬಾಲವಿಸ್ಮಯ ಎಂದೂ ವಿಖ್ಯಾತರಾಗಿ ಹರಿಕೀರ್ತನ, ಸಂಗೀತ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಗೈದ ಪೂಜ್ಯ ಶ್ರೀಮತಿ ಪುತ್ತೂರು, ಮಾರ್ಪಳ್ಳಿ ಪದ್ಮಾವತಿ ಎಸ್.ರಾವ್. (1923–2003) ಅವರ ಜನ್ಮಶತಮಾನದ ಈ ವರ್ಷದಲ್ಲಿ ಅವರನ್ನು ನೆನಪಿಸಿ, ಅವರ ಬದುಕಿನ ಕುರಿತಾದ ಪುಸ್ತಕವನ್ನು ಪ್ರಕಾಶಿಸುತ್ತಿರುವುದು ಪ್ರಶಂಸನೀಯ. 1932ರಲ್ಲಿ ಒಂಬತ್ತನೆಯ ವರ್ಷಕ್ಕೇ ಕೀರ್ತನಾರಂಭ ಎಂದರೆ ಅವರು ವಿಶೇಷ ಬಾಲ ಪ್ರತಿಭೆ Prodigy ಆಗಿರಬೇಕಷ್ಟೇ. ತಂದೆ ಬಹುಕಲಾ ನಿಪುಣ ತಾಳೆಪ್ಪಾಡಿ ಸೀತಾರಾಮರಾವ್. ಬಂಧುಗಳ ಶಿಕ್ಷಕರ ಪ್ರೋತ್ಸಾಹ ಸಿಕ್ಕಿದ್ದು ಯೋಗ.

‘ಶತದಳ ಪದ್ಮ’ – ನೆನಪಿನ ಗೋಪುರಕ್ಕೊಂದು ಕಲಶ ಎಂಬ ಲೇಖನದಲ್ಲಿ ಡಾ. ಬಿ.ಎ. ವಿವೇಕ ರೈ ಇವರ ಅಭಿಪ್ರಾಯ ಹೀಗಿದೆ  ಹರಿಕಥಾ ವಿದುಷಿ ‘ಬಾಲಭಾರತಿ’ ಶ್ರೀಮತಿ ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಜನ್ಮ ಶತಮಾನೋತ್ಸವ ಸಂಸ್ಮರಣೆಯ ‘ಶತದಳ ಪದ್ಮ’ ಗ್ರಂಥವು ಒಂದು ಅಪೂರ್ವ ಸಾಧಕಿಯ ಅನನ್ಯ ದಾಖಲೆಯಾಗಿದೆ. ತನ್ನ ಅಮ್ಮನ ಬಗ್ಗೆ ವಿಜಯಲಕ್ಷ್ಮಿ ಬಾಲಚಂದ್ರ ರಾವ್ ಅವರು ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರದಿದ್ದರೆ ಕನ್ನಡ ಸಾಂಸ್ಕೃತಿಕ ಲೋಕವು ಒಂದು ಲೋಪಕ್ಕೆ ಒಳಗಾಗುತ್ತಿತ್ತು. ವಿಜಯಲಕ್ಷ್ಮಿ ಅವರ ಗಂಡ ನಂದಳಿಕೆ ಬಾಲಚಂದ್ರ ರಾವ್ ಅವರು ಕವಿ ಮುದ್ದಣನನ್ನು ಬಹುರೂಪಿಯಾಗಿ ಸದಾ ಜೀವಂತವಾಗಿ ಉಳಿಸಿಕೊಂಡು ಬಂದ ಸಾಹಸಿಗರು. ಅವರಿಂದ ಪ್ರೇರಣೆಯನ್ನು ಪಡೆದ ಪತ್ನಿ ವಿಜಯಲಕ್ಷ್ಮಿ ಅವರು ಕಾಲಗರ್ಭದಲ್ಲಿ ಮರೆಯಾಗಿ ಹೋದ ಅವರ ಅಮ್ಮ ಪದ್ಮಾವತಿ ರಾವ್ ಅವರ ಕಲಾ ಬದುಕಿನ ಅಪೂರ್ವ ಯಾನವನ್ನು ಇಲ್ಲಿ ಬಹುಮುಖಿಯಾಗಿ ದರ್ಶಿಸುವ ಸಾರ್ಥಕತೆಯನ್ನು ಪಡೆದಿದ್ದಾರೆ.

ಹರಿಕಥಾ ವಿದುಷಿ ಪುತ್ತೂರು ಪದ್ಮಾವತೀಬಾಯಿ ಎಂಬ ಲೇಖನದಲ್ಲಿ ಹರಿಹರ ಪ್ರಿಯ ಬೆಂಗಳೂರು ಇವರು ಅನಿಸಿಕೆಯನ್ನು ತಿಳಿಸಿರುವರು. ಮೂರು ಕಾರಣಗಳಿಂದ ಪದ್ಮಾವತೀ ಬಾಯಿಯವರು ನನ್ನ ಕುತೂಹಲ ಸೆಳೆದರು. ಒಂದು, ಬಾಲಪ್ರತಿಭಾವಂತರು ಎಂದು, ಎರಡು, ಮಹಿಳಾ ಹರಿಕಥೆ ದಾಸರು ಎಂದು. ಮೂರು, ಶಿವರಾಮ ಕಾರಂತರ ಕಾರ್ಯಕ್ಷೇತ್ರವಾದ ಪುತ್ತೂರಿನವರು ಎಂದು. ಹೀಗಾಗಿ ಅವರನ್ನು ಕಾಣಲು ಬಯಸಿದೆ.

‘ಶತಮಾನದ ಬೆಳಕು ಹರಿಕಥೆ ಕಲಾವಿದೆ ಪದ್ಮಾವತಿಬಾಯಿ’ ಎಂಬ ಲೇಖನದಲ್ಲಿ ಡಾ. ಜಿ.ಎಂ. ಹೆಗಡೆ, ಧಾರವಾಡ ಇವರು ತಿಳಿಸುತ್ತಾರೆ – ಹರಿಭಕ್ತಿಸುಧೆಯನ್ನು ಹರಿಸುವ ಹರಿಕಥೆ ಕರ್ನಾಟಕದ ಪ್ರಸಿದ್ಧವಾದ ಕಲೆ. ದಕ್ಷಿಣ ಕನ್ನಡ ಜಿಲ್ಲೆಯ ಪದ್ಮಾವತಿಬಾಯಿ ಅವರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಹರಿಕಥೆ ಮಾಡಲು ಆರಂಭಿಸಿ ಜೀವಮಾನ ಪರ್ಯಂತ ಹರಿಕಥೆ ಮಾಡುವ ಕಲಾವಿದೆಯಾಗಿ ಕೀರ್ತಿ ಪಡೆದವರು. ಅವರು ಹರಿಕಥೆಯ ಮೂಲಕ ಜನಸಾಮಾನ್ಯರಲ್ಲಿ ಸಂಸ್ಕೃತಿ ಪ್ರಸಾರ ಮಾಡಿದರು. ಪದ್ಮಾವತಿ ಅಮ್ಮನವರು ಈಗ ಶತಮಾನದ ಬೆಳಕಾಗಿದ್ದಾರೆ. ಅವರು ತಮ್ಮ ಜೀವನವನ್ನು ಪರಮಾತ್ಮನ ಸೇವೆಗಾಗಿ ಸವಿಸಿದರು. ಮಹಿಳಾ ಹರಿಕಥೆಕಲಾವಿದೆಯಾಗಿ ಅವರು ಜನಪ್ರಿಯರಾದರು.

ಉಪಸಂಹಾರ ಲೇಖನದಲ್ಲಿ ವೈ. ಎಂ. ಶ್ರೀಧರ ರಾವ್, ಅದಮಾರು ಇವರು ತಿಳಿಸುತ್ತಾರೆ – ಅಂತಹ ಸೌಭಾಗ್ಯವಂತೆ ಹರಿಕಥೆ ಪದ್ಮಾವತಿ ಎಂದೇ ಪ್ರಖ್ಯಾತರಾಗಿ 81 ವರ್ಷಗಳವರೆಗೆ ಬಾಳಿಬದುಕಿದ ಗೌರವಾನ್ವಿತೆ ಹರಿಕೀರ್ತನಾ ವಿದುಷಿ – “ಬಾಲಭಾರತಿ” ಪ್ರಶಸ್ತಿ ವಿಜೇತೆ – ಹರಿಕಥೆ ಪದ್ಮಾವತಿ ನಿಜವಾಗಿಯೂ ಹರಿಕಥೆ ಪದ್ಮಾವತಿದೇವಿಯೇ ಆಗಿದ್ದರು ಎಂಬುದು ಪರಮ ಸಂತೋಷವನ್ನುಂಟುಮಾಡುತ್ತಿದೆ.

ಶ್ರೀಮತಿಯವರು ದಿನಾಂಕ : 2–10–2003ರಂದು ಸ್ವರ್ಗಸ್ಥರಾದರೂ ಅವರ ಅಂತರಾತ್ಮ ಸಜೀವವಾಗಿದ್ದು, ನಮ್ಮನ್ನೆಲ್ಲಾ ಹರಸುತ್ತಿರಲಿ! ಅವರ ಪವಿತ್ರಾತ್ಮಕ್ಕೆ ಚಿರಶಾಂತಿ ಇರಲಿ! ಅವರ ಜೀವಿತದ ಆದರ್ಶ ಹಾಗೂ ಮಾರ್ಗದರ್ಶನ ಚಿರಂಜೀವಿಗಳಿಗೆಲ್ಲಾ ಲಭ್ಯವಾಗಲಿ! ತಾಳುವಿಕೆಗಿಂತ ಅನ್ಯತಪವು ಇನ್ನಿಲ್ಲ ಎಂಬ ಹಾಡನ್ನು ಹರಿಕಥೆ ಪದ್ಮಾವತಿಯವರು ಹಾಡಿರಲೂಬಹುದು. ಆ ತಪಸ್ಸು ನಮಗೆ ಶ್ರೀರಕ್ಷೆಯಾಗಿರಲಿ! ಎಂದು ಭಗವಂತನಲ್ಲಿ ಹೃತ್ಪೂರ್ವಕ ಪ್ರಾರ್ಥನೆ.

ಮಾರ್ಪಳ್ಳಿ ಗಂಗಾಧರ ರಾವ್, ಮಾರ್ಪಳ್ಳಿ ಶಾಂತರಾಮ ರಾವ್, ವೈ. ಎಂ. ಶ್ರೀಧರ ರಾವ್, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ, ಪ್ರದೀಪ್ ಕುಮಾರ್ ಪಂಜ, ಶಿರ್ತಾಡಿ ರಾಜೇಂದ್ರ ಕುಮಾರ್, ಕಲಾರತ್ನ ಶಂನಾಡಿಗ, ಕುಂಬ್ಳೆ, ಶ್ರೀಮತಿ ಮಂಜುಳಾ ಜಿ. ರಾವ್ ಇರಾ, ಡಾ. ಎಸ್.ಪಿ. ಗುರುದಾಸ್, ಶ್ರೀಮತಿ ಮಹಾಲಕ್ಷ್ಮೀ, ಎನ್.ಎಸ್. ರಾಮಕೃಷ್ಣ ರಾವ್, ಚಂದ್ರಕಲಾ ನಂದಾವರ, ಲಕ್ಷ್ಮೀಶ ತೋಳ್ಪಾಡಿ, ಡಾ. ಬಿ. ಜನಾರ್ದನ ಭಟ್, ಅಂಬಾತನಯ ಮುದ್ರಾಡಿ, ಬೆಂಡರವಾಡಿ ಸುಬ್ರಹ್ಮಣ್ಯ ಶರ್ಮ, ಜಿ.ಕೆ. ಐತಾಳ್, ಅ.ಶಾ.ಕೋ, ಅರುಣ ಕುಮಾರ್ ಹಬ್ಬು, ಹುಬ್ಬಳ್ಳಿ, ಡಾ। ಎಚ್. ಹರಿಕೃಷ್ಣ ಭಟ್, ವೈ. ಅನಂತಪದ್ಮನಾಭ, ಕಾರ್ಕಳ, ಕೂಡ್ಲು ಮಹಾಬಲ ಶೆಟ್ಟಿ, ಎನ್. ತಿರುಮಲೇಶ್ವರ ಭಟ್ಟ, ವೈಸೂರು ಮಹಾಲಿಂಗಪ್ಪ, ತಿಪಟೂರು ಇವರೆಲ್ಲರ ಉತ್ತಮ ಲೇಖನಗಳು ಗ್ರಂಥದಲ್ಲಿವೆ.

ಬಾಲಭಾರತಿ ಹರಿಕೀರ್ತನಾ ವಿದುಷಿ ಮಾರ್ಪಳ್ಳಿ ಪದ್ಮಾವತಿ ಎಸ್. ರಾವ್ ಅವರ ಜನ್ಮ ಶತದಿನೋತ್ಸವವನ್ನು (1923–2023) ಇತ್ತೀಚೆಗೆ ನಡೆಸಲಾಯಿತು. ಹಾಗೆಯೇ ಸಾಹಿತಿ ಮಾರ್ಪಳ್ಳಿ ಹರಿದಾಸ ರಾವ್ (1919–1954) ಇವರ ಜನ್ಮ ಶತದಿನೋತ್ಸವದ ನೆನಪಿನಾಳದಲ್ಲಿ ನಾವಿದ್ದೇವೆ. ತುಳುನಾಡಿನ ಸ್ಥಾನೀಯ ಬಣ್ಣ ಎದ್ದು ಕಾಣುವ ಇವರ ‘ಬಾಳಿನ ಗಿಡ’ ಕಾದಂಬರಿ 8ನೆಯ ಮುದ್ರಣ ಕಂಡಿದೆ. ‘ಶತದಳ ಪದ್ಮ’ ಹರಿಕಥಾ ವಿದುಷಿ ಬಾಲಭಾರತಿ ಶ್ರೀಮತಿ ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಜನ್ಮ ಶತಮಾನೋತ್ಸವ ಸಂಸ್ಮರಣೆ ಗ್ರಂಥ ಬಿಡುಗಡೆಗೊಂಡಿದೆ. ಇವರಿಬ್ಬರೂ ಉಡುಪಿಯ ಮಾರ್ಪಳ್ಳಿಯವರು. ಒಬ್ಬರು ಹರಿಕಥಾ ಕಲೆಯಲ್ಲಿ ವಿಖ್ಯಾತರು ಹಾಗೂ ಇನ್ನೊಬ್ಬರು ಲೇಖನ ಕಲೆಯಲ್ಲಿ ಸುಪ್ರಸಿದ್ಧರು. ಇವರಿಬ್ಬರಿಂದಾಗಿ ಹಳ್ಳಿ ‘ಮಾರ್ಪಳ್ಳಿ’ ಹೆಸರು ಎಲ್ಲೆಡೆ ಪಸರಿಸಿತು. ಇವರ ಸೇವೆ, ಸಾಧನೆ ಇಂದಿನ ಯುವಜನತೆಗೆ ಆದರ್ಶವಾಗಿದೆ. ಮುಂದಿನ ಪೀಳಿಗೆಗೆ ಪ್ರೇರಣೆಯಾಗಿದೆ.

‘ಬಾಳಿನ ಗಿಡ’ ಖ್ಯಾತಿಯ ಸಾಹಿತಿ ಮಾರ್ಪಳ್ಳಿ ಹರಿದಾಸ ರಾವ್ ಅವರ ಸ್ಮರಣಾರ್ಥ ವಿಶೇಷ ಅಂಚೆ ಲಕೋಟೆಯನ್ನು ಉಡುಪಿ ಅಂಚೆ ಅಧೀಕ್ಷಕ ಕೃಷ್ಣರಾಜ ವಿಠಲ ಭಟ್ ಅವರು ಲೋಕಾರ್ಪಣೆಗೊಳಿಸಿದರು. ಭಾರತ ಸರಕಾರ ಅಂಚೆ ಇಲಾಖೆ ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಇವರ ಜನ್ಮ ಶತದಿನೋತ್ಸವ ಸಂದರ್ಭದಲ್ಲಿ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆಗೊಳಿಸಿತು. ಕಾಂತಾವರ ಕನ್ನಡ ಸಂಘದ ‘ನಾಡಿಗೆ ನಮಸ್ಕಾರ’ ವಿಶೇಷ ಮಾಲಿಕೆ ಮಾರ್ಪಳ್ಳಿ ಹರಿದಾಸ ರಾವ್ ಮತ್ತು ಪದ್ಮಾವತಿ ಶಿವರಾಮ ರಾವ್ ಕುರಿತ ಎರಡು ಪುಸ್ತಕಗಳನ್ನು ಲೇಖಕಿ ಡಾ. ಸರ್ವಮಂಗಳ ಅವರು ಬಿಡುಗಡೆಗೊಳಿಸಿದರು. ಮಾರ್ಪಳ್ಳಿ ನಾಗಪ್ಪಯ್ಯ ಟ್ರಸ್ಟ್ ಅಧ್ಯಕ್ಷ ಎಂ. ಆರ್. ವಾಸುದೇವ ಸಮಾರಂಭದಲ್ಲಿ ಉಪಸ್ಥಿತರಿದ್ದರು.

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com




**RAJESH POWER PRESS**
**PRINTERS & PUBLISHERS**
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**

## ನಿಧನ



ಉಡುಪಿ ಬೈಲಕೆರೆ ದಿ| ಯು. ಶ್ರೀಪತಿ ರಾವ್‌ರವರ ಪತ್ನಿ ಶ್ರೀಮತಿ ಸರೋಜಿನಿ ಅವರು ತಮ್ಮ 82ನೇ ವಯಸ್ಸಿನಲ್ಲಿ ತಾ.17.05.2023 ರಂದು ಉಡುಪಿಯಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ದಿ| ಬೊಳ್ಳಾವ ಲಕ್ಷ್ಮೀನಾರಾಯಣ ರಾವ್ ಅವರ ಪತ್ನಿ ಶ್ರೀಮತಿ ವಾರಿಜಾ ಅವರು ತಮ್ಮ 74ನೇ ವಯಸ್ಸಿನಲ್ಲಿ ತಾ.16.05.2023 ರಂದು ನಿಧನರಾದರು. ಅವರು ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

★★★★ ★★★★



ಶ್ರೀ ಗೋವಿಂದ ರಾವ್ ಚೆಂಡುಕಲಾ ಅವರ ಪತ್ನಿ ಶ್ರೀಮತಿ ಪುಷ್ಪಾ ಅವರು ತಾ.19.05.2023 ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ತಮ್ಮ ಪತಿ ಮತ್ತು ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ನಾಯನಕಟ್ಟೆ ಕುಂದಾಪುರ ತಾಲೂಕಿನ ಶ್ರೀ ಹೊಸಕೋಟೆ ಗೋಪಾಲ್ ರಾವ್ ಅವರು ತಮ್ಮ 91ನೇ ವಯಸ್ಸಿನಲ್ಲಿ ತಾ.19.05.2023 ರಂದು ನಿಧನರಾದರು. ಅವರು ತಮ್ಮ ಪತ್ನಿ ಶ್ರೀಮತಿ ಜಾನಕಿ, ಮೂವರು ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಶ್ರೀ ರಮೇಶ್ ರಾವ್ ನಂದಾವರ ಅವರು ತಾ.15.05.2023ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ಒಬ್ಬ ಮಗ ಮತ್ತು ಒಬ್ಬ ಮಗಳನ್ನು ಅಗಲಿದ್ದಾರೆ.

★★★★ ★★★★



ಶ್ರೀಮತಿ ಭಾಗೀರಥಿ ನಾರಾಯಣಶೇಟ್ ಶಾನುಭಾಗ್ ಅವರು ತಮ್ಮ 87ನೇ ವಯಸ್ಸಿನಲ್ಲಿ ತಾ.14.05.2023ರಂದು ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★



ಶ್ರೀ ರಮೇಶ್ ರಾವ್ ಹೆಜಮಾಡಿ ಅವರು ತಮ್ಮ 65ನೇ ವಯಸ್ಸಿನಲ್ಲಿ ತಾ.04.06.2023ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ತಮ್ಮ ಪತ್ನಿ ಮತ್ತು ಒಬ್ಬಳು ಮಗಳನ್ನು ಅಗಲಿದ್ದಾರೆ.

★★★★ ★★★★




ದಿವಂಗತ ಶ್ರೀ ಮರವಂತೆ ಗಣಪಯ್ಯ ಶಾನುಭೋಗರವರ ಪತ್ನಿ ಶ್ರೀಮತಿ ವಿಶಾಲಾಕ್ಷಿಯಮ್ಮ ಅವರು ತಮ್ಮ 91ನೇ ವಯಸ್ಸಿನಲ್ಲಿ ತಾ.07.06.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ನಾಲ್ವರು ಗಂಡು ಮತ್ತು ಐದು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

★★★★ ★★★★



ದಿವಂಗತ ಶ್ರೀಮತಿ ಮಹಾಲಕ್ಷ್ಮೀಯವರ ಪತಿ ಶ್ರೀ ಕೋಲ್ಪೆ ರಾಮಸುಂದರ ಶಾಸ್ತ್ರಿಯವರು ತಮ್ಮ 97ನೇ ವಯಸ್ಸಿನಲ್ಲಿ ತಾ.20.05.2023 ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ನಾಲ್ವರು ಗಂಡು ಮಕ್ಕಳು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ಕಾರ್ಕಳ ಶಂಕರ ಪ್ರತಿಷ್ಠಾನದ ಮಾಜಿ ಅಧ್ಯಕ್ಷರಾದ ಶ್ರೀ ರಾಮ್ ಮೋಹನ್ ರಾವ್ ಮುನಿಯಲ್ ಅವರು ತಮ್ಮ 92ನೇ ವಯಸ್ಸಿನಲ್ಲಿ ಅಲ್ಪ ಕಾಲದ ಅನಾರೋಗ್ಯದಿಂದ ತಾ. 21.05.2023ರಂದು ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

★★★★ ★★★★



ನಮ್ಮ ಸಂಘದ ನಿರ್ದೇಶಕರಾದ ಉಡುಪಿ ಅಂಬಲ್ಪಾಡಿ ನಿವಾಸಿ ಕೆ.ವೇಣುಗೋಪಾಲ್ ರಾವ್‌ರವರ ಪತ್ನಿ ಶ್ರೀಮತಿ ವಿ. ರಾವ್ ಅವರು ತಮ್ಮ 62ನೇ ವಯಸ್ಸಿನಲ್ಲಿ ತಾ.22.05.2023ರಂದು ಬೆಂಗಳೂರಿನಲ್ಲಿ ನಿಧನರಾದರು. ಮಣಿಪಾಲ ಕೋ ಅಪರೇಟಿವ್ ಬ್ಯಾಂಕಿನ ನಿವೃತ್ತ ಆಫೀಸರ್ ಆಗಿದ್ದು, ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾ ವೇದಿಕೆಯ ಮಾಜಿ ಅಧ್ಯಕ್ಷರಾಗಿದ್ದು, ಸಕ್ರಿಯರಾಗಿದ್ದ ಶ್ರೀಮತಿಯವರು ಪತಿ ವೇಣುಗೋಪಾಲ್ ರಾವ್, ಪುತ್ರಿ ಹಾಗೂ ಅಳಿಯನನ್ನು ಅಗಲಿದ್ದಾರೆ.

★★★★ ★★★★



ಶ್ರೀ ಕೋಟೇಶ್ವರ ಸುರೇಶ್ ರಾವ್ ಅವರು ತಮ್ಮ 56ನೇ ವಯಸ್ಸಿನಲ್ಲಿ ತಾ.15.05.2023ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ತಮ್ಮ ಪತ್ನಿ ಮತ್ತು ಮಗಳನ್ನು ಅಗಲಿದ್ದಾರೆ.

★★★★ ★★★★



ಆಗುಂಬೆ ಶ್ರೀ ಸುಬ್ರಹ್ಮಣ್ಯ ಹೆಬ್ಬಾರ್ ಅವರ ಪತ್ನಿ ಶ್ರೀಮತಿ ಸುಜಾತಾ ಅವರು ತಮ್ಮ 57 ನೇ ವಯಸ್ಸಿನಲ್ಲಿ ತಾ.25.05.2023 ರಂದು ನಿಧನರಾದರು. ಅವರು ತಮ್ಮ ಪತಿ ಮತ್ತು ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ.

★★★★ ★★★★




ಶ್ರೀಮತಿ ವಾರಿಜ ರಾಮಪ್ಪಯ್ಯ ಹೈದಂಗೂರು ಅವರು ತಮ್ಮ 78ನೇ ವಯಸ್ಸಿನಲ್ಲಿ ತಾ.28.05.202023ರಂದು ನಿಧನರಾದರು. ಅವರು ಒಬ್ಬ ಮಗ ಮತ್ತು ಮೂವರು ಹೆಣ್ಣುಮಕ್ಕಳನ್ನು ಅಗಲಿದ್ದಾರೆ.

★★★★ ★★★★



ದಿವಂಗತ ಆರೂರು ತಮ್ಮಯ್ಯ ಅವರ ಪತ್ನಿ ಶ್ರೀಮತಿ ಲೀಲಾವತಿಯಮ್ಮ ಅವರು ತಮ್ಮ 90ನೇ ವಯಸ್ಸಿನಲ್ಲಿ ತಾ.05.06.2023 ರಂದು ನಿಧನರಾದರು. ಅವರು ನಾಲ್ವರು ಗಂಡು ಮಕ್ಕಳು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

★★★★ ★★★★



ದಿ| ಸುಬ್ಬರಾವ್ ಮಣಿಕ್ಕಳ ಅವರ ಪತ್ನಿ ಶ್ರೀಮತಿ ಲೀಲಾವತಿ ಅವರು ತಮ್ಮ 90ನೇ ವಯಸ್ಸಿನಲ್ಲಿ ತಾ. 17.05.2023 ರಂದು ಮಣಿಕ್ಕಳದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. ಅವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

## ಶ್ರೀ ಶಂಕರ ಪ್ರತಿಷ್ಠಾನ (ರಿ.)

**ಪ್ರಸಾದ ಭವನ, ಕಾರ್ಕಳ – 574104**

ಪ್ರತೀ ವರ್ಷದಂತೆ ಈ ವರ್ಷವೂ ಕಾರ್ಕಳ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಭಾವಂತ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿಯುಸಿಯಲ್ಲಿ ಪಾಸ್ ಆದ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನವನ್ನು ನಮ್ಮ ಸಂಘದ ವಾರ್ಷಿಕೋತ್ಸವ ದಿನದಂದು (30.07.2023 ಆದಿತ್ಯವಾರ) ಗಣ್ಯರ ಸಮ್ಮುಖದಲ್ಲಿ ವಿತರಿಸಲಾಗುವುದು, ಅರ್ಹ ವಿದ್ಯಾರ್ಥಿಗಳಿಗೆ ಈ ವಿಷಯವನ್ನು ಕಾರ್ಕಳ ತಾಲೂಕಿನ ನಮ್ಮ ಸಮಾಜದ ಎಲ್ಲಾ ಮನೆಗಳಿಗೂ ತಲುಪಿಸಿ.

**ವಿದ್ಯಾರ್ಥಿಗಳು ಕೆಳಕಂಡ ವಿಳಾಸಕ್ಕೆ ತಮ್ಮ ಅರ್ಜಿಯೊಂದಿಗೆ, ಮೊಬೈಲ್ ನಂಬರ್, ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿ, ಅಂಕಪಟ್ಟಿಯನ್ನು ದಿನಾಂಕ 15.07.2023ರ ಒಳಗೆ ಕಳುಹಿಸಬೇಕು.** ಸ್ಥಾನಿಕ ಬ್ರಾಹ್ಮಣ ಸಮಾಜದ ಕಾರ್ಕಳ ತಾಲೂಕಿನ ವಿದ್ಯಾರ್ಥಿಗಳಲ್ಲದೆ ಬೇರೆ ಸಮಾಜದ ಮಕ್ಕಳ ಅರ್ಜಿಯನ್ನು ಸ್ವೀಕರಿಸುವುದಿಲ್ಲ.

ನೀವು ಸಂಪರ್ಕಿಸಲು :

**ಶ್ರೀ ಕೇಶವ ರಾವ್, ಅಧ್ಯಕ್ಷರು, ಶ್ರೀ ಶಂಕರ ಪ್ರತಿಷ್ಠಾನ (ಮೊ : 9902332609)**
**ಶ್ರೀ ಸತೀಶ್ ರಾವ್ ಕರ್ವಾಲು, ಜೊತೆ ಕಾರ್ಯದರ್ಶಿ (ಮೊ : 94815 11144)**
**ಶ್ರೀ ಭವಾನಿಶಂಕರ ರಾವ್ ಸಂಚಾಲಕರು, ವಿದ್ಯಾನಿಧಿ (ಮೊ : 9980543123)**
**ಶ್ರೀಮತಿ ವಿದ್ಯಾವತಿ ಅಧ್ಯಕ್ಷರು, ಮಹಿಳಾ ವಿಭಾಗ (ಮೊ : 8618035766)**
**ಶ್ರೀಮತಿ ಮಲ್ಲಿಕಾ ಹೆಬ್ಬಾರ್ ಕಾರ್ಯದರ್ಶಿ, ಮಹಿಳಾ ವಿಭಾಗ (ಮೊ : 7353371403)**

ಅಂಕಪ್ರತಿ ಹಾಗೂ ಅರ್ಜಿಯನ್ನು ಕಳುಹಿಸಲು ವಿಳಾಸ :

**ಶ್ರೀ ಸತೀಶ್ ರಾವ್ ಕೆ.**
**ಜೊತೆ ಕಾರ್ಯದರ್ಶಿ, ಶ್ರೀ ಶಂಕರ ಪ್ರತಿಷ್ಠಾನ (ರಿ.), ಕಾರ್ಕಳ**
**ಶ್ರೀ ಮಾತಾ, ಕರ್ವಾಲು ಅಂಚೆ, ಯರ್ಲಪಾಡಿ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ–574102**

## ಶ್ರದ್ಧಾಂಜಲಿ

ಇತ್ತೀಚೆಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿ ಇದರ ಆಡಳಿತ ಮಂಡಳಿ ಸಭೆಯು ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಪ್ರಭಾಕರ ಭಂಡಿಯವರು ನಮ್ಮ ಸಂಘದ ಮಹಿಳಾ ವೇದಿಕೆಯ ಮಾಜಿ ಅಧ್ಯಕ್ಷರಾದ ಶ್ರೀಮತಿ ವಿ. ರಾವ್ ಇತ್ತೀಚೆಗೆ ಅಗಲಿದ್ದಾರೆ. ಹಾಗೂ ನಮ್ಮ ಸಂಘದಲ್ಲಿ ಮೊದಲು ಲೆಕ್ಕ ಪರಿಶೋಧಕರಾಗಿದ್ದ ಯು.ಕೆ.ಮಯ್ಯರು ಕೂಡ ನಿಧನರಾಗಿದ್ದಾರೆ. ಇವರಿಬ್ಬರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕೋರಿದರು. ನಂತರ ಒಂದು ನಿಮಿಷ ಮೌನ ಪ್ರಾರ್ಥನೆಯನ್ನು ಸಲ್ಲಿಸಲಾಯಿತು.

## ಅಗಲಿದ ಚೇತನ ಹೊಸ್ಕೋಟೆ ಗೋಪಾಲರಾಯರಿಗೆ ಶ್ರದ್ಧಾಂಜಲಿ

ಇತ್ತೀಚೆಗೆ ನಿಧನರಾದ ಹೊಸ್ಕೋಟೆ ಗೋಪಾಲ ರಾವ್ (92 ವರ್ಷ) ರವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವು ತಾ.31.05.2023ರಂದು ಮೃತರ ಸ್ವಗೃಹ ಹೊಸ್ಕೋಟೆ “ಶುಭ ಸಂಕಲ್ಪ” ದಲ್ಲಿ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘದ ಗೌರವಾಧ್ಯಕ್ಷರಾದ ಶ್ರೀ. ಜೆ.ಎಚ್. ಕೃಷ್ಣಗೋಪಾಲ ಹೆಬ್ಬಾರರವರ ಅಧ್ಯಕ್ಷತೆಯಲ್ಲಿ ಜರುಗಿತು.

ಮೃತರ ಮಕ್ಕಳಾದ ಶ್ರೀ ಗಣೇಶ್‌ರಾವ್, ಶ್ರೀ ಶಂಕರ ರಾವ್, ಶ್ರೀ ಸುಬ್ರಹ್ಮಣ್ಯ ರಾವ್, ಶುಭಾ ಶಾನುಭೋಗ ಹಾಗೂ ಎಚ್. ಮಾಧವ ರಾವ್, ಎಚ್. ಭಾಸ್ಕರ ರಾವ್, ಬಿ. ವೆಂಕಪ್ಪಯ್ಯ ಹೆಬ್ಬಾರ, ಎಚ್. ಕೃಷ್ಣರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಎಚ್. ಆನಂದ ರಾವ್ ಸ್ವಾಗತಿಸಿದರು. ಮೃತರ ಚಿರಶಾಂತಿ ಕೊಡಲಿ ಒಂದು ನಿಮಿಷ ಮೌನ ಪ್ರಾರ್ಥನೆಯನ್ನು ನೆರವೇರಿಸಲಾಯಿತು. ಸಭಿಕರ ಪರವಾಗಿ ರಾಘವೇಂದ್ರ ರಾವ್, ಜೆ.ಎಚ್. ರಾಜಶೇಖರ, ಬಿ. ಮಂಜುನಾಥ ಹೆಬ್ಬಾರ, ಸಂದರ್ಭೋಚಿತವಾಗಿ ಮಾತನಾಡಿದರು. ಜಗದೀಶ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಎಚ್.ಲಕ್ಷ್ಮೀನಾರಾಯಣ ರಾವ್ ವಂದನಾರ್ಪಣೆ ಸಲ್ಲಿಸಿದರು.

**ಕವನ**

## ಸ್ಥಿತ್ಯಂತರ

ಗಂಡಿಗೆ ಗಂಡಲ್ಲ,
ಹೆಣ್ಣಿಗೆ ಹೆಣ್ಣಲ್ಲ,
ಇವೆರಡರ ಮಧ್ಯದ ಮನುಷ್ಯಾತ್ಮ......|

ಗಂಡು ದೇಹದಲ್ಲಿ
ಹೆಣ್ಣಿನ ಮನಸು,
ಹೆಣ್ಣಿನ ಉಡುಪು, ಹಾವಭಾವ, ವರ್ತನೆ.....
ಈ ರೀತಿ ಸೃಷ್ಟಿಸಿದ್ದೇಕೋ ಪರಮಾತ್ಮ......||

ಉದುರಿದವಳಲ್ಲ, ಉಲ್ಕೆಯಂತೆ,
ಆಕಸ್ಮಿಕವಾಗಿ ಆಕಾಶದಿಂದ............|
ಜನಿಸಿದವಳು ನಮ್ಮ ನಿಮ್ಮೆಲ್ಲರಂತೆ,
ಏನೆಲ್ಲ ಬನ್ನ ಬವಣೆ
ಅನುಭವಿಸಿ, ತಾಯಗರ್ಭದಿಂದ........||

ಕರೆಯುವರು ನನ್ನನ್ನು
ಮುಂಬೈ ಸೇರಿದಂತೆ
ಉತ್ತರ ಭಾರತದಲ್ಲಿ ಹಿಜಡಾ, ಇಂಗ್ಲೀಷ್‌ನಲ್ಲಿ ಟ್ರಾನ್ಸ್‌ಜೆಂಡರ್,
ತಮಿಳುನಾಡಿನಲ್ಲಿ ಆರವಣಿ, ಕೇರಳದಲ್ಲಿ ಚಕ್ಕಾಮಾರ್,
ಆಂಧ್ರದಲ್ಲಿ ಶಿವಶಕ್ತಿ............|
ಕರ್ನಾಟಕದಲ್ಲಿ ಮಾತ್ರ,
ಸುಂದರವಾದ ಹೆಸರು ಮಂಗಳಮುಖಿ........||

ಬೇಡ ಖಂಡಿತ ನಿಮ್ಮ
ಕರುಣೆ, ಅನುಕಂಪವೆನಗೆ.............|
ಬೇಕು–ಕೌಟುಂಬಿಕ, ಸಾಮಾಜಿಕ
ಸ್ವೀಕೃತಿ, ಬೆಂಬಲ ನನಗೆ..................||

ಲೈಂಗಿಕ ಹಾರ್ಮೋನುಗಳಿಂದ
ಉಂಟಾಗುವ ಬದಲಾವಣೆ..........|
ವಿಕೃತಿಯಲ್ಲವಿದು,
ಪ್ರಕೃತಿ ಸಹಜ ಚಟುವಟಿಕೆ.........||

ದೂಷಿಸದಿರಿ ನಮ್ಮೀ
ದೈಹಿಕ ಸ್ಥಿತ್ಯಂತರವನ್ನು...
ಅರ್ಥೈಸಲು ಪ್ರಯತ್ನಿಸಿ
ನಮ್ಮ ಮನಸ್ಸನ್ನು.......|

ಬಿಡಿಸಬಲ್ಲೆ–ಕಲಾವಿದರಿಗಿಂತಲೂ,
ಮಿಗಿಲಾಗಿ ರಂಗೋಲಿ..........|
ಮಾಡಬಲ್ಲೆ–ಹೇಮಾ ಮಾಲಿನಿ, ಮಾಧುರಿ ದೀಕ್ಷಿತ್‌ರನ್ನೂ
ಮೀರಿಸುವಂತೆ ನೃತ್ಯ.........||

ವಿಧಿಯ ಕ್ರೌರ್ಯವೆನ್ನಿ,
ಕರ್ಮ ಬಂಧನವೆನ್ನಿ,
ನೋಡಿ ಸ್ವಾಮಿ – ನಾವಿರೋದೆ ಹೀಗೆ........|
ನನ್ನ ದೇಹ, ನನ್ನ ಹಕ್ಕು ಎಂಬ
ಮಹಿಳಾವಾದದ ಸಿದ್ಧಾಂತದ ಹಾಗೆ.....||

ಪ್ರಭು ಶ್ರೀರಾಮಚಂದ್ರನ
ಕೃಪಾಶೀರ್ವಾದ..................|
ಆಳುವೆವು ಭಾರತವನ್ನು
ಮುಂದೊಂದು ದಿನ......................||

**– ಎಚ್.ಮಲ್ಲಿಕಾರ್ಜುನ ರಾವ್, ಕಾಪು**

## ಶುಭ ವಿವಾಹ

ಶ್ರೀ ದಿನಕರ ರಾವ್ ಕೆಳೆಂಜೆ ಮತ್ತು ಶ್ರೀಮತಿ ವಾಣಿ ಬಾರ್ಕೂರು ಅವರ ಪುತ್ರಿ **ಚಿ। ಸೌ। ಸಹನಾ**ರವರ ವಿವಾಹವು ಶ್ರೀ ಮಸ್ಕಿಬೈಲ್ ಜಯಪ್ರಕಾಶ್ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮಿ ಅವರ ಪುತ್ರ **ಚಿ। ಅಜಯ್**ರವರೊಂದಿಗೆ ತಾ.12.05.2023 ರಂದು ಒಕ್ಕಲಿಗ ಗೌಡ ಸಮುದಾಯ ಭವನ ಪುತ್ತೂರಿನಲ್ಲಿ ಜರಗಿತು.

★★★★ ★★★★

ಡಾ। ಶ್ರೀ ಜೆ. ವಿವೇಕಾನಂದ ಹೆಬ್ಬಾರ್ ಕಾರ್ಗಲ್ ಮತ್ತು ಶ್ರೀಮತಿ ಅರುಣಾ ಹೆಬ್ಬಾರ್ ಅವರ ಪುತ್ರಿ **ಚಿ।ಸೌ। ಜ್ಯೋತ್ಸ್ನಾ**ರವರ ವಿವಾಹವು ಶ್ರೀ ಮೋಹನ್ ರಾವ್ ಮಾರ್ಪಳ್ಳಿ ಮತ್ತು ಶ್ರೀಮತಿ ಮೋಹಿನಿ ಅವರ ಪುತ್ರ **ಚಿ। ಕಾರ್ತಿಕ್**ರವರೊಂದಿಗೆ ತಾ.07.05.2023ರಂದು ಶ್ರೀ ಚೌಡೇಶ್ವರಿ ಕಲ್ಯಾಣಮಂಟಪ ಕಾರ್ಗಲ್‌ನಲ್ಲಿ ಜರಗಿತು.

★★★★ ★★★★

ಶ್ರೀ ದಿ। ಅನಂತಪದ್ಮನಾಭ ರಾವ್ ಮತ್ತು ಶ್ರೀಮತಿ ರೇಣುಕಾ ಅವರ ಪುತ್ರ **ಚಿ। ಸುಬ್ರಹ್ಮಣ್ಯ ಪ್ರಸಾದ್**ರವರ ವಿವಾಹವು ಶ್ರೀ ಗೋಪಾಲಶಂಕರ ವೆಂಗುರ್ಲೇಕರ್ ಹಾಗೂ ಶ್ರೀಮತಿ ಸುಗಂಧಾ ಅವರ ಪುತ್ರಿ **ಚಿ।ಸೌ। ಜ್ಯೋತ್ಸ್ನಾ**ರವರೊಂದಿಗೆ ತಾ.12.05.2023ರಂದು ಮುಂಬೈನ ಭಾಟಿಯಾ ಬ್ಯಾಂಕ್ವೆಟ್ ಹಾಲ್‌ನಲ್ಲಿ ಜರಗಿತು.

★★★★ ★★★★

ಪುತ್ತೂರಿನ ಶ್ರೀಮತಿ ಜಯಂತಿ ರಾವ್ ಮತ್ತು ದಿ। ಶ್ರೀ ಮೋರಾಜೆ ಚಂದ್ರಶೇಖರ ರಾವ್ ಅವರ ಪುತ್ರಿ **ಚಿ।ಸೌ। ಎಂ.ಸಿ. ಅಮೃತಾ**ರವರ ವಿವಾಹವು ಶ್ರೀಮತಿ ಎಂ.ಎ. ಜಯಂತಿ ಮತ್ತು ದಿ। ಅನಿಲ್ ಮೇಸ್ತರ ಪುತ್ರ **ಚಿ। ಭರತ್**ರವರೊಂದಿಗೆ ತಾ.01.06.2023 ರಂದು ನಂದಿನಿ ಲೇಔಟ್ ಬೆಂಗಳೂರು, ತೆಂಕಿಲ ಸ್ವಾಮಿ ಕಲಾ ಮಂದಿರ ಪುತ್ತೂರು ಇಲ್ಲಿ ಜರಗಿತು.

ಶ್ರೀಮತಿ ಮಲ್ಲಿಕಾಲತಾ ಮತ್ತು ಶ್ರೀ ಚಂದ್ರಕುಮಾರ ಮಾಸ್ತಿಬೈಲು ಬಾರ್ಕೂರು ಅವರ ಪುತ್ರಿ **ಚಿ।ಸೌ। ಮೇಘನಾ ರಾವ್**ರವರ ವಿವಾಹವು ಶ್ರೀಮತಿ ಕವಿತಾ ಮತ್ತು ಡಾ। ಜಯಪ್ರಕಾಶ್‌ರವರ ಪುತ್ರ **ಚಿ। ಸರ್ವೇಶ್ ರಾವ್**ರವರೊಂದಿಗೆ ತಾ.29.05.2023ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ರಾಜೇಶ್ವರಿ ಮತ್ತು ಉಜ್ಜೋಡಿ ಶ್ರೀ ಶ್ರೀನಿವಾಸ್ ರಾವ್ ಅವರ ಪುತ್ರಿ **ಚಿ।ಸೌ। ಸುಷ್ಮಾ**ರವರ ವಿವಾಹವು ಶ್ರೀಮತಿ ಶಶಿ ಯೋಗೇಶ್ ಅವರ ಪುತ್ರ **ಚಿ। ಶುಭಂ**ರವರೊಂದಿಗೆ ತಾ.21.05.2023 ರಂದು ಶ್ರೀ ಸುಬ್ರಹ್ಮಣ್ಯ ಸೇವಾ ಸದನದಲ್ಲಿ ಜರಗಿತು.

★★★★ ★★★★

ಶ್ರೀಮತಿ ಕುಮುದಾ ಮತ್ತು ಶ್ರೀ ಉದಯ ಹೆಮ್ಮಾಡಿ ಅವರ ಪುತ್ರಿ **ಚಿ।ಸೌ। ಪ್ರತೀಕ್ಷಾ**ರವರ ವಿವಾಹವು ಶ್ರೀಮತಿ ಸಿಂಗಾರಿ ಮತ್ತು ದಿ। ಶ್ರೀ ಮಲ್ಲಾರು ಶಂಕರ್ ರಾವ್ ಅವರ ಪುತ್ರ **ಚಿ। ಗಣೇಶ್** ರವರೊಂದಿಗೆ ತಾ.21.05.2023ರಂದು 'ನವಶಕ್ತಿ ಕಲ್ಯಾಣ ಮಂಟಪ' ತೆಕ್ಕಟ್ಟೆಯಲ್ಲಿ ಜರಗಿತು.

★★★★ ★★★★

ಶ್ರೀಮತಿ ಸುಮನಾ ಮತ್ತು ಶ್ರೀ ಮಠದ ಬೆಟ್ಟು ಮೋಹನ ರಾವ್ ಅವರ ಪುತ್ರಿ **ಚಿ।ಸೌ। ಶ್ರೀವಿದ್ಯಾ ರಾವ್**ರವರ ವಿವಾಹವು ಶ್ರೀಮತಿ ಸುನಂದಾ ಮತ್ತು ಶ್ರೀ ಶಿವರಾಮ ರಾವ್ ಬೈರಿಕಟ್ಟೆ ಅವರ ಪುತ್ರ **ಚಿ। ಶ್ರೀಶ ರಾವ್ ಡಿ.ಎಸ್.**ರವರೊಂದಿಗೆ ತಾ.1.6.2023 ರಂದು ಧರ್ಮಶ್ರೀ ಸಭಾಭವನ ನಾರಾವಿ ಯಲ್ಲಿ ಜರಗಿತು.

★★★★ ★★★★

ಶ್ರೀಮತಿ ಸರೋಜಿನಿ ಮತ್ತು ಶ್ರೀ ಶಾಂತಿನಾಥ ರಾವ್ ಎಲ್ಲೂರು ಅವರ ಪುತ್ರ **ಚಿ। ಮಹೇಶ**ರವರ ವಿವಾಹವು ಶ್ರೀಮತಿ ಹರಿಣಿ ಮತ್ತು ಕೀ.ಶೇ.ನಾಗರಾಜ್ ಶಾನುಭಾಗ್ ಬಜೆ ದಂಪತಿಯ ಪುತ್ರಿ **ಚಿ।ಸೌ। ಅಪೂರ್ವ**ರವರೊಂದಿಗೆ ತಾ.12.06.2023 ರಂದು ಉಡುಪಿ ಚಿಟ್ಪಾಡಿ ಸರಸ್ವತಿ ಸಭಾ ಸದನದಲ್ಲಿ ಜರಗಿತು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.06-07-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.02-07-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-06-2023 ಮತ್ತು ತಾ.07-07-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮಿಥುನ ಮಾಸದ ವಿಶೇಷ ದಿನಗಳು

| | | | |
|---|---|---|---|
| 15.06.2023 | ಮಿಥುನ ಸಂಕ್ರಮಣ | 04.07.2023 | ಗ್ರೀಷ್ಮ ಋತು ಆಷಾಢ ಮಾಸದ ಕೃಷ್ಣ ಪಕ್ಷಾರಂಭ |
| 18.06.2023 | ಅಮಾವಾಸ್ಯೆ | 06.07.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 10.00 |
| 19.06.2023 | ಗ್ರೀಷ್ಮ ಋತು ಆಷಾಢ ಮಾಸದ ಶುಕ್ಲ ಪಕ್ಷಾರಂಭ | 13.07.2023 | ಸರ್ವೈಕಾದಶಿ |
| 21.06.2023 | ದಕ್ಷಿಣಾಯನ ಆರಂಭ | 16.07.2023 | ಕರ್ಕಾಟಕ ಸಂಕ್ರಮಣ |
| 29.06.2023 | ಸರ್ವೈಕಾದಶಿ | 17.07.2023 | ಆಟಿ ಅಮಾವಾಸ್ಯೆ |
| 03.07.2023 | ಗುರು ಪೂರ್ಣಿಮಾ | 18.07.2023 | ವರ್ಷ ಋತು ಅಧಿಕ ಶ್ರಾವಣ ಮಾಸದ ಶುಕ್ಲಪಕ್ಷಾರಂಭ |

## ಎಂ.ಜೆ.ಎಫ್. ಹರ್ಷಕುಮಾರ್ ಕನಕವಲ್ಲಿ ದಂಪತಿಗಳಿಗೆ ಲಯನ್ಸ್ ಪ್ರಶಸ್ತಿ



ತಾ.10.06.2023 ರಂದು ಸಕಲೇಶಪುರದ ಬಂಟರ ಭವನದಲ್ಲಿ ಜರಗಿದ ಲಯನ್ಸ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ದಕ್ಷಿಣ ಕನ್ನಡ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೊಳಗೊಂಡ ಲಯನ್ಸ್ ಜಿಲ್ಲೆ 371-ಡಿ ಅಂತರಾಷ್ಟ್ರೀಯ ಸೇವಾ ಸಂಸ್ಥೆ ಇದರಲ್ಲಿ ಲಯನ್ ಎಂ.ಜೆ.ಎಫ್. ಹರ್ಷಕುಮಾರ್ ಕೇದಗೆ ಮತ್ತು ಕನಕವಲ್ಲಿ ಎಚ್. ಕೇದಗೆ ದಂಪತಿಗಳಿಗೆ ಜಿಲ್ಲಾ ಗವರ್ನರ್ ಸಂಜಿತ್ ದಂಪತಿಗಳು ನೂರಾರು ಜನರ ಕರತಾಡನದೊಂದಿಗೆ "GOLD AWARD"ನ್ನು ನೀಡಿ ಗೌರವಿಸಿದರು. 38 ವರುಷಗಳಿಂದ ಲಯನ್ಸ್ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯ ಸದಸ್ಯರಾಗಿದ್ದು ಹಲವಾರು ಸೇವಾಕಾರ್ಯಗಳನ್ನು ಮಾಡಿ ಈ ಪ್ರಶಸ್ತಿಗೆ ಭಾಜನರಾಗಿರುತ್ತಾರೆ ಎಂದು ಶ್ಲಾಘಿಸಿದರು.

## ಗೃಹಪ್ರವೇಶ

ಶ್ರೀ ಸಂದೀಪ್ ರಾವ್ ಮತ್ತು ಶ್ರೀಮತಿ ಸ್ವಾತಿ ಅವರು ತಾ.21.05.2023 ರಂದು ಬೆಂಗಳೂರಿನ ಬಾಗಲಕುಂಟೆಯ ಪ್ರೆಸ್ಟೀಜ್ ಜಿಂದಾಲ್ ಸಿಟಿಯಲ್ಲಿರುವ ತಮ್ಮ ಹೊಸ ಅಪಾರ್ಟ್‌ಮೆಂಟಿನಲ್ಲಿ ತಮ್ಮ ಗೃಹಪ್ರವೇಶ ಸಮಾರಂಭವನ್ನು ನೆರವೇರಿಸಿದರು.

## ಶುಭ ಜನನ

ಬಾಳಕುಂಜೆಯಲ್ಲಿ ನೆಲೆಸಿರುವ ಶ್ರೀ ನಾಗಭೂಷಣ ಮತ್ತು ಶ್ರೀಮತಿ ಐ.ಕೆ. ಸುಪರ್ಣ ದಂಪತಿಯ ಪುತ್ರ ಕುಂಜೂರು ಶಶಾಂಕ್ ರಾವ್ ಮತ್ತು ಶ್ರೀಮತಿ ಶರಣ್ಯ ದಂಪತಿಗಳು ತಾ.15.05.2023 ರಂದು ಗಂಡು ಮಗುವಿಗೆ ಜನನ ನೀಡಿದರು.


Ph : 98459 92859

Ganesh Hebbar & Associates

CHARTERED ACCOUNTANT

S.M.S.P. Complex, Udupi - 576 101.







*With Best Complimemts From*

SRI M. SHAILESH RAO

Ph : 9448624324

B.E., Civil

Civil Engineer & Contractor

SRI MALAVIKA ASSOCIATES

KALSANKA-UDUPI ROAD, UDUPI.

Website : shreemaalavikaassociates.com



## ಬ್ರಹ್ಮೋಪದೇಶ

ಶ್ರೀ ಅಜ್ಜಾವರ ರಾಜೇಶ್ ರಾವ್ ಮತ್ತು ಶ್ರೀಮತಿ ನಿಖಿಲಾ ದಂಪತಿಯು ಪುತ್ರ **ಚಿ। ಶ್ರೀವರ್ಧನ್**‌ನ ಬ್ರಹ್ಮೋಪದೇಶವು ತಾ.11.05.2023ರಂದು ಶ್ರೀ ಮಹಿಷ ಮರ್ದಿನಿ ದೇವಸ್ಥಾನ ಸಭಾಭವನ ಅಜ್ಜಾವರದಲ್ಲಿ ನೆರವೇರಿತು.

★★★★ ★★★★

ಶ್ರೀ ಕಿಶನ್ ಪ್ರಸಾದ್ ಹೆಚ್.ಎಲ್. ಮತ್ತು ಶ್ರೀಮತಿ ಅಶ್ವಿನಿ ದಂಪತಿಯು ಪುತ್ರ **ಚಿ। ಈಶಾನ್**‌ನ ಬ್ರಹ್ಮೋಪದೇಶವು ತಾ.14.05.2023 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನದಲ್ಲಿ ನೆರವೇರಿತು.

★★★★ ★★★★

ಶ್ರೀ ನವೀನ್ ರಾವ್ ಮತ್ತು ಶ್ರೀಮತಿ ಸೌಮ್ಯಲತಾ ದಂಪತಿಯು ಪುತ್ರ, ಶ್ರೀ ಉಪ್ಪುಂದ ಮನೋಹರ ರಾವ್ ಮತ್ತು ಶ್ರೀಮತಿ ಗಾಯತ್ರಿ ಬೆಂಗಳೂರು ಅವರ ಮೊಮ್ಮಗ **ಚಿ। ಅಮೋಘ**ನ ಬ್ರಹ್ಮೋಪದೇಶವು ತಾ.11.05.2023 ರಂದು ಅವರ ನಿವಾಸ ಗುರುಕೃಪಾ ದರ್ಬೆ ಪುತ್ತೂರಿನಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಮೋಹನಾ ಮತ್ತು ಶ್ರೀ ಲಕ್ಷ್ಮೀನಾರಾಯಣ ಶಾನುಭಾಗ್ ಹಾಗೂ ಶ್ರೀಮತಿ ಜಯಲಕ್ಷ್ಮೀ ಮತ್ತು ವೈ.ಮುರಳೀಧರ ರಾವ್‌ರವರ ಪೌತ್ರ, ಶ್ರೀಮತಿ ಜ್ಯೋತಿ ಮತ್ತು ಶ್ರೀ ಹರ್ಷವರ್ಧನ್ ಶಾನುಭಾಗ ಇವರ ಪುತ್ರ **ಚಿ। ಧ್ರುವ**ನ ಬ್ರಹ್ಮೋಪದೇಶವು ತಾ.07.06.2023ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಉಡುಪಿ ಚಿಟ್ಪಾಡಿ ಡಾ। ಸನತ್ ರಾವ್ ಮತ್ತು ಶ್ರೀಮತಿ ಮಮತಾ ದಂಪತಿಯ ಪುತ್ರ **ಚಿ। ಶ್ರೀಹಾನ್**‌ನ ಬ್ರಹ್ಮೋಪದೇಶವು ತಾ.21.05.2023 ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ಅಮಿತ ರಾವ್ ಮತ್ತು ಗಿರೀಶ್ ರಾವ್ ಕೊಕ್ರಾಡಿ ದಂಪತಿಯ ಪುತ್ರ ಹಾಗೂ ಶ್ರೀಮತಿ ಕುಮುದಾವತಿ ಮತ್ತು ಚಂದ್ರಶೇಖರ ರಾವ್ ಕೊಕ್ರಾಡಿ ಅವರ ಮೊಮ್ಮಗ **ಚಿ। ಸುಮುಖ**ನ ಬ್ರಹ್ಮೋಪದೇಶವು ತಾ.21.5.2023ರಂದು ಶ್ರೀ ಮಹಾಲಿಂಗೇಶ್ವರ ಸಭಾಂಗಣ ಪುತ್ತೂರು ಇಲ್ಲಿ ಜರಗಿತು.

★★★★ ★★★★

ಶ್ರೀಮತಿ ಚಂದ್ರಿಕಾ ಹಾಗೂ ಶ್ರೀ ಗುರುಪ್ರಸಾದ್ ಹೆಬ್ಬಾರ್ ದಂಪತಿಯ ಪುತ್ರ ಚಿ। ಪ್ರತೀಕ್‌ನಿಗೆ ಮತ್ತು ಶ್ರೀಮತಿ ರತ್ನಾವತಿ ಹಾಗೂ ಶ್ರೀ ಹರಿಪ್ರಸಾದ್ ಹೆಬ್ಬಾರ್ ಪುತ್ರ **ಚಿ। ಭುವನ್ ಹೆಚ್**‌ನ ಬ್ರಹ್ಮೋಪದೇಶವು ತಾ.14.05.2023ರಂದು ಹೆಬ್ರಿ ಶ್ರೀ ಅನಂತಪದ್ಮನಾಭ ಸನ್ನಿಧಿ ಸಭಾಭವನದಲ್ಲಿ ಜರಗಿತು.

★★★★ ★★★★

ಶ್ರೀಮತಿ ಸ್ವಾತಿ ಹಾಗೂ ಶ್ರೀ ರಾಜೇಶರಾವ್ ದಂಪತಿಯು ಪುತ್ರ **ಚಿ। ಅಭಿನಂದನ್**‌ನ ಬ್ರಹ್ಮೋಪದೇಶವು ತಾ. 24.05.2023ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀಮತಿ ದಿವ್ಯಜ್ಯೋತಿ ಮತ್ತು ಶ್ರೀ ಸಂತೋಷ್ ರಾವ್ ಕೇದಗೆ ದಂಪತಿಯ ಪುತ್ರ ಹಾಗೂ ಶ್ರೀ ಶ್ರೀಧರ್ ರಾವ್ ಕೇದಗೆ ಮತ್ತು ಶ್ರೀಮತಿ ಯಶೋಧ ದಂಪತಿಯ ಮೊಮ್ಮಗ **ಚಿ। ಅದ್ರಿತ್**‌ನ ಬ್ರಹ್ಮೋಪದೇಶವು ತಾ.24.05.2023ರಂದು ಕೃಷ್ಣ ಅನುಗ್ರಹ ಉಜಿರೆಯಲ್ಲಿ ನೆರವೇರಿತು.

★★★★ ★★★★

ಶ್ರೀಮತಿ ಆಶಾ ಮತ್ತು ಶ್ರೀ ಅಶ್ವಿನಿ ಕುಮಾರ್ ದಂಪತಿಯ ಪುತ್ರ ಮತ್ತು ಶ್ರೀ ಮಟ್ಟು ಆನಂದ್ ರಾವ್ ಮತ್ತು ಶ್ರೀಮತಿ ಶೈಲಜಾ ಅವರ ಮೊಮ್ಮಗ **ಚಿ। ಅಶ್ವೀಜ್**‌ನ ಬ್ರಹ್ಮೋಪದೇಶವು ತಾ.24.05.2023 ರಂದು ಶ್ರೀ ಗುರುರಾಘವೇಂದ್ರ ಸನ್ನಿಧಿ ಶ್ರೀ ಸೀತಾರಾಮ ಸಭಾಭವನ ಹೆಬ್ರಿಯಲ್ಲಿ ನೆರವೇರಿತು.

★★★★ ★★★★

ಶ್ರೀ ಅವನೀಶ್ ಮತ್ತು ಶ್ರೀಮತಿ ಸೌಮ್ಯ ದಂಪತಿಯ ಪುತ್ರ, ಶ್ರೀ ನಂದಳಿಕೆ ವಿ. ರಾಮಪ್ರಸಾದ್ ಮತ್ತು ದಿ। ಶ್ರೀಮತಿ ಪದ್ಮಾ ಮತ್ತು ಶ್ರೀ ಹರಿಕರ್ ವಿ. ರಘುಪತಿ ಮತ್ತು ಶ್ರೀಮತಿ ಪ್ರಭಾವತಿ ಅವರ ಮೊಮ್ಮಗ **ಚಿ। ಅನಂಶ್**, ಬ್ರಹ್ಮೋಪದೇಶವು ತಾ.21.05.2023 ರಂದು ದಿ ಬ್ಲಿಸ್ ರಾಂಚ್ ಆಬ್ರೆ, ಟೆಕ್ಸಾಸ್ U.S.Aನಲ್ಲಿ ಜರಗಿತು.

★★★★ ★★★★

ಶ್ರೀಮತಿ ಸುಖಿತಾ ಮತ್ತು ಶ್ರೀ ಉಮೇಶ್ ದಂಪತಿಯ ಪುತ್ರ ಮತ್ತು ಶ್ರೀಮತಿ ಲಲಿತಾ ಮತ್ತು ದಿವಂಗತ ಶ್ರೀ ನಂದಳಿಕೆ ವಿ. ಕಿಶನ್ ಪ್ರಸಾದ್ ಅವರ ಮೊಮ್ಮಗ, (ನಿವೃತ್ತ ಪೊಲೀಸ್ ಉಪ ಆಯುಕ್ತರು) **ಚಿ। ಅಹಾನ್ ಜೋಯಿಸ್**‌ನ ಬ್ರಹ್ಮೋಪದೇಶವು ತಾ.24.05.2023ರಂದು ಶ್ರೀರಾಮ ಮಂದಿರ, ತಿಲಕನಗರ, ಜಯನಗರ 9ನೇ ಬ್ಲಾಕ್, ಬೆಂಗಳೂರು ಇಲ್ಲಿ ಜರಗಿತು.

★★★★ ★★★★

ಶ್ರೀಮತಿ ಮಧುರಾ ಮತ್ತು ಶ್ರೀ ಶಶಿಕಾಂತ್ ದಂಪತಿಯು ಪುತ್ರ **ಚಿ। ಆಯುಷ್ಮಾನ್ ಶಮಂತ್**‌ನ ಬ್ರಹ್ಮೋಪದೇಶವು ತಾ. 21.05.2023ರಂದು ಭಾರತೀ ತೀರ್ಥ ಸಭಾಭವನ, ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಮಟಂತಬೆಟ್ಟು ಇಲ್ಲಿ ಜರಗಿತು.

★★★★ ★★★★

ಶ್ರೀಮತಿ ಸವಿತಾ ಮತ್ತು ಶ್ರೀ ಅನಿಲ್ ರಾವ್ ದಂಪತಿಯ ಪುತ್ರ ಮತ್ತು ಶ್ರೀಮತಿ ಸುಲೋಚನಾ ಹಾಗೂ ಶ್ರೀ ಕೀರ್ತಿಶೇಷ ನೆಲ್ಲಿಕುಂಜ ವಿಷ್ಣುರಾವ್ ಅವರ ಮೊಮ್ಮಗ **ಚಿ। ಅಲೋಕ್** ಅವರ ಬ್ರಹ್ಮೋಪದೇಶವು ತಾ.29.05.2023ರಂದು ಶಿವಗಿರಿ ಕಲ್ಯಾಣ ಮಂಟಪ ಹೊಸಬೆಟ್ಟು ಸುರತ್ಕಲ್‌ನಲ್ಲಿ ಜರಗಿತು.

★★★★ ★★★★

ಶ್ರೀ ಕೀರ್ತಿಶೇಷ ಪಾದೇಬೆಟ್ಟು ಗಣೇಶ್ ರಾಯರ ಪೌತ್ರರು, ಶ್ರೀಮತಿ ಸೌಮ್ಯ ಮತ್ತು ಶ್ರೀ ಅರುಣ್ ಶಾನುಭಾಗ್ ದಂಪತಿಯ ಪುತ್ರರಾದ **ಚಿ। ವಿಹಾನ್** ಮತ್ತು **ಚಿ। ಈಶಾನ್** ಇವರ ಬ್ರಹ್ಮೋಪದೇಶವು ತಾ.01.06.2023 ರಂದು ಹೊಸಬೆಟ್ಟು "ನವಗಿರಿ ಕಲ್ಯಾಣ "ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀ ಕೀರ್ತಿಶೇಷ ಪಾದೆಬೆಟ್ಟು ಗಣೇಶರಾಯರ ಪೌತ್ರ, ಶ್ರೀಮತಿ ಚಂದ್ರಿಕಾ ಮತ್ತು ಶ್ರೀ ಸುಬ್ರಹ್ಮಣ್ಯ ಶಾನುಭಾಗ ದಂಪತಿಯು ಪುತ್ರ **ಚಿ। ಸಂವಿತ್**‌ನ ಬ್ರಹ್ಮೋಪದೇಶವು ತಾ.09.06.2023ರಂದು ಉಡುಪಿ ಶ್ಯಾಮಿಲಿ ಮಂಟಪದಲ್ಲಿ ಜರಗಿತು.

★★★★ ★★★★

ಶ್ರೀ ಬಿ. ಸಚಿತಾನಂದ ರಾವ್ ಮತ್ತು ಶ್ರೀಮತಿ ವಿದ್ಯಾ ಎಸ್ ದಂಪತಿಯ ಪುತ್ರ, ಶ್ರೀಮತಿ ಅರುಂಧತಿ ಬಿ. ರಾವ್ ಮತ್ತು ದಿವಂಗತ ಪಿ.ಭಾಸ್ಕರ್ ರಾವ್ ಮತ್ತು ಶ್ರೀಮತಿ ಪದ್ಮಿನಿ ಹಾಗೂ ಶ್ರೀ ಕೆಮಣ್ಣು ಅನಿಲ್ ಕುಮಾರ್ ಅವರ ಮೊಮ್ಮಗ **ಚಿ। ಅಶಿತೋಷ್**‌ನ ಉಪನಯನವು ತಾ.09.06.2023ರಂದು ಶ್ರೀ ವಿಶ್ವೇಶ್ವರ ವೇಣುಗೋಪಾಲ ದೇವಸ್ಥಾನ ಸಭಾಭವನ ಕಾರ್ಕಳ ಇಲ್ಲಿ ಜರಗಿತು.

## ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರೆ : ಮಹಾಸಭೆ ಮತ್ತು ವಾರ್ಷಿಕೋತ್ಸವ





ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆ ಇದರ ಮಹಾಸಭೆ ಮತ್ತು ವಾರ್ಷಿಕೋತ್ಸವ ದಿನಾಂಕ 28.05.2023ರಂದು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಸಭಾಂಗಣದಲ್ಲಿ ಜರುಗಿತು. 2022–23ನೇ ಸಾಲಿನ ಮಹಾಸಭೆಯ ಅಧ್ಯಕ್ಷತೆಯನ್ನು ಶ್ರೀ ಎಂ.ಕೆ. ಮೋಹನ್ ರಾವ್ ವಹಿಸಿದ್ದರು. ಶ್ರೀ ಮಾಧವ ರಾವ್ ಸ್ವಾಗತಿಸಿ, ಕಾರ್ಯದರ್ಶಿ ಶ್ರೀಮತಿ ರಮ್ಯಾ ವರದಿ ವಾಚಿಸಿ ಕೋಶಾಧಿಕಾರಿ ಶ್ರೀ ಅರವಿಂದ್ ರಾವ್ ಲೆಕ್ಕಪತ್ರ ಮಂಡನೆ ಮಾಡಿದರು. ಶ್ರೀ ನಯನಾಭಿರಾಮ ಸ್ವಾಮಿ ಅವರು ಧನ್ಯವಾದ ನೀಡಿದರು. ಬಳಿಕ ಸಂಘದ ಹದಿನಾಲ್ಕನೇ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಎಂ.ಕೆ. ಮೋಹನ್ ರಾವ್ ವಹಿಸಿದ್ದರು. ಸುಭಾಶಂಷನೆಯನ್ನು ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್ ಹಾಗೂ ವೇದಿಕೆಯಲ್ಲಿ ಮುಖ್ಯ ಅತಿಥಿಯಾಗಿ ಮಹಾಮಂಡಲದ ಕಾರ್ಯದರ್ಶಿಯಾದಂತಹ ಶ್ರೀ ಮುರಳಿಧರ ಶರ್ಮ ಹಾಗೂ ಸಂಘದ ಕಾರ್ಯದರ್ಶಿ ಶ್ರೀಮತಿ ರಮ್ಯಾ ಅರುಣ್ ಕುಮಾರ್, ಕೋಶಾಧಿಕಾರಿ ಶ್ರೀ ಅರವಿಂದ ರಾವ್ ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ವೇದಾವತಿ ಲಕ್ಷ್ಮಿಕಾಂತ್ ರಾವ್, ಯುವ ವೇದಿಕೆ ಅಧ್ಯಕ್ಷರಾದ ಶ್ರೀ ಎಸ್. ಜನಾರ್ದನ್ ರಾವ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಶೇಕಡ ತೊಂಬತ್ತಕ್ಕಿಂತ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ಧನ ನೀಡಲಾಯಿತು. ಸಾಧಕ ಸನ್ಮಾನ ನೆಲೆಯಲ್ಲಿ ಉದ್ಯಮ ಕ್ಷೇತ್ರದ ಸಾಧಕರಾದ ಕೊಡುಗೈ ದಾನಿಗಳಾದಂತಹ ಶ್ರೀ ಎಸ್. ಜನಾರ್ಧನ್ ರಾವ್ ನಂದಿಕೂರು ಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಕುಮಾರಿ ಶರಣ್ಯ ಪ್ರಾರ್ಥಿಸಿ ಶ್ರೀಮತಿ ವೇದಾವತಿ ಲಕ್ಷ್ಮಿಕಾಂತ್ ರಾವ್ ಸ್ವಾಗತಿಸಿದರು. ಶ್ರೀಮತಿ ರಮ್ಯಾ ಸನ್ಮಾನ ಪತ್ರ, ಶ್ರೀಮತಿ ವೇದಾವತಿ ದಿವಾಕರ ರಾವ್ ದಾನಿಗಳ ಪಟ್ಟಿ, ಶ್ರೀ ಅನಂತರಾಮ ರಾವ್ ಪ್ರತಿಭಾ ಪುರಸ್ಕಾರದ ಪಟ್ಟಿ ಹಾಗೂ ಶ್ರೀಮತಿ ಸೌಮ್ಯ ಎಲ್ಲೂರು ಪ್ರೋತ್ಸಾಹಧನ ಪಟ್ಟಿಗಳನ್ನು ವಾಚಿಸಿದರು.

ಬ್ರಹ್ಮಾವರ ಸಂಘದ ಕಾರ್ಯದರ್ಶಿ ಶ್ರೀಮತಿ ಸವಿತಾ ಎರ್ಮಾಳು ಕಾರ್ಯಕ್ರಮದ ಬಗ್ಗೆ ಅನಿಸಿಕೆಗಳನ್ನು ತಿಳಿಸಿದರು. ಶ್ರೀಯುತ ಅರುಣ್ ಕುಮಾರ್ ಹಾಗೂ ಶ್ರೀಮತಿ ಪವಿತ್ರ ಕೃಷ್ಣ ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು. ಸಂಘದ ಎಲ್ಲಾ ನಿರ್ದೇಶಕರು ಮಹಿಳಾ ವೇದಿಕೆ ಸದಸ್ಯರು ಯುವ ವೇದಿಕೆ ಸದಸ್ಯರು ಸಹಕರಿಸಿದರು. ಸಭೆಯಲ್ಲಿ ಹೆಚ್ಚಿನ ಸಂಖ್ಯೆಯ ಸಮಾಜ ಬಾಂಧವರು, ಬ್ರಹ್ಮಾವರ ಸುರತ್ಕಲ್ ಸಂಘದ ಸದಸ್ಯರು ಉಪಸ್ಥಿತರಿದ್ದರು ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಸಾಂಸ್ಕೃತಿಕ ಕಾರ್ಯಕ್ರಮ ನಿರೂಪಿಸಿದರು.

## ನಾಮಕರಣ

ಶ್ರೀಮತಿ ಶ್ರೀಲತಾ ರಾವ್ ಮತ್ತು ಶ್ರೀ ಕೆ. ಪ್ರಕಾಶ ರಾವ್ ಇವರ ಪುತ್ರಿ ಶ್ರೀಮತಿ ದಿಶಾ ರಾವ್ ಹಾಗೂ ಶ್ರೀಮತಿ ಕವಿತಾ ಮತ್ತು ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಇವರ ಪುತ್ರ ಶ್ರೀ ಬೊಕ್ಕಸ ಚೇತನ ರಾವ್ ಇವರು ತಮ್ಮ ಮಗಳು "ಆರೋಹಿ" ಯ ನಾಮಕರಣ ಸಮಾರಂಭವನ್ನು ಅಂಬಲಪಾಡಿಯ ಕಾಳಿಕಾಂಬ ನಗರದಲ್ಲಿರುವ ಮನೆ ಶಾಂತಾಲಯದಲ್ಲಿ ದಿನಾಂಕ 07.05.2023 ರಂದು ನೆರವೇರಿಸಿದರು.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ.: ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.


ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಎಸ್‌ಎಸ್‌ಎಲ್‌ಸಿ ಸಾಧಕರು




**ಸದ್ರುಷಾ ಎ. ರಾವ್**

ಶ್ರೀ ಎಸ್. ಅರವಿಂದ ಮತ್ತು ಡಾ. ಶ್ರೀಮತಿ ಶ್ರೀವಿದ್ಯಾ ಕೆ.ಜೆ. ದಂಪತಿಯ ಪುತ್ರಿ ಕುಮಾರಿ ಸದ್ರುಷಾ ಎ. ರಾವ್ ಎಸ್.ಎಸ್.ಎಲ್.ಸಿ.ಯಲ್ಲಿ 97.8% ಅಂಕಗಳಿಸಿದ್ದಾರೆ.



**ಪವನ್ ರಾವ್ ಕೆ**

ಶ್ರೀ ಮುರಳೀಧರ ರಾವ್ ಕೆ ಮತ್ತು ಶ್ರೀಮತಿ ಸುಖವಾಣಿ ರಾವ್ ಕೆ ಹೆಬ್ಬಗೋಡಿ, ಬೆಂಗಳೂರು ರವರ ಪುತ್ರ ಪವನ್ ರಾವ್ ಕೆ ಎಸ್.ಎಸ್.ಎಲ್.ಸಿ.ಯಲ್ಲಿ 97.76% ಅಂಕ ಪಡೆದು ಸ್ಕೂಲ್ ಟಾಪರ್ ಆಗಿದ್ದಾರೆ.




**ದಿವ್ಯಲಕ್ಷ್ಮಿ**

ಶ್ರೀ ಉಚ್ಚಿಲ ಗಣೇಶ್ ರಾವ್ ಮತ್ತು ಶ್ರೀಮತಿ ವಾಣಿಯವರ ಪುತ್ರಿ ಕುಮಾರಿ ದಿವ್ಯಲಕ್ಷ್ಮಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 97% ಗಳಿಸಿದ್ದಾರೆ.



**ಎಂ. ಸಮೀಕ್ಷಾ ರಾವ್**

ಮಾಂಟ್ರಾಡಿ ಶ್ರೀ ರವೀಂದ್ರ ರಘುರಾಮ್ ರಾವ್ ಮತ್ತು ಶ್ರೀಮತಿ ವಾಣಿಶ್ರೀ ಅದ್ಯಪಾಡಿ ಪ್ರಭಾಕರ ಸ್ವಾಮಿ ಅವರ ಪುತ್ರಿ ಎಂ. ಸಮೀಕ್ಷಾ ರಾವ್ ಅವರು ಎಸ್.ಎಸ್.ಎಲ್.ಸಿ.ಯಲ್ಲಿ 96.5% ಅಂಕ ಗಳಿಸಿದ್ದಾರೆ.



**ಕುಮಾರಿ ಸಿಂಚನಾ ರಾವ್**

ಶ್ರೀಮತಿ ಶ್ವೇತಾ ರಾಘವೇಂದ್ರ ಮತ್ತು ಶ್ರೀ ರಾಘವೇಂದ್ರ ರಾವ್ ಎಂ.ಡಿ. ಬೆಂಗಳೂರು ಇವರ ಪುತ್ರಿ ಕುಮಾರಿ ಸಿಂಚನಾ ರಾವ್ ಎಂ.ಆರ್. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 96.4% ಗಳಿಸಿದ್ದಾರೆ.



**ಪಿ. ಎಸ್.ಯಶಸ್**

ಕಳಸದ ಶ್ರೀಯುತ ಪಿ. ಸುಬ್ರಹ್ಮಣ್ಯ ರಾವ್ (ಸುಬ್ಬು) ಹಾಗೂ ಶ್ರೀಮತಿ ಕಾವ್ಯ ದಂಪತಿಗಳ ಪುತ್ರ ಪಿ. ಎಸ್ ಯಶಸ್ ಎಸ್.ಎಸ್.ಎಲ್.ಸಿ. ಯಲ್ಲಿ 96% ಅಂಕಗಳಿಸಿದ್ದಾರೆ.



**ಎಂ ಪ್ರತೀಕ್ಷಾ ರಾವ್**

ಮಾಂಟ್ರಾಡಿ ಶ್ರೀ ರವೀಂದ್ರ ರಘುರಾಮ್ ರಾವ್ ಮತ್ತು ಶ್ರೀಮತಿ ವಾಣಿಶ್ರೀ ಅದ್ಯಪಾಡಿ ಪ್ರಭಾಕರ ಸ್ವಾಮಿಯವರ ಪುತ್ರಿ ಎಂ ಪ್ರತೀಕ್ಷಾ ರಾವ್ ಅವರು ಎಸ್.ಎಸ್.ಎಲ್.ಸಿ.ಯಲ್ಲಿ 94% ಅಂಕ ಗಳಿಸಿದ್ದಾರೆ.



**ಸಂಪ್ರೀತಾ ಎಂ.ಆರ್.**

ಶ್ರೀ ರಾಘವೇಂದ್ರ ಎಂ.ಎಸ್ ಮತ್ತು ಡಾ. ಶ್ರೀಮತಿ ಗಾಯತ್ರಿ ಎಂ.ಆರ್. ದಂಪತಿಯ ಪುತ್ರಿ ಕುಮಾರಿ ಸಂಪ್ರೀತಾ ಎಂ.ಆರ್. ಎಸ್.ಎಸ್.ಎಲ್.ಸಿ.ಯಲ್ಲಿ 94% ಅಂಕಗಳಿಸಿದ್ದಾರೆ.



**ಸಮರ್ಥ ಮಡಿಯಾಲ**

ಶ್ರೀ ಮಹೇಶ್ ಮಡಿಯಾಲ ಮತ್ತು ಶ್ರೀಮತಿ ಸಪ್ನಾ ಬೆಂಗಳೂರು ದಂಪತಿಯ ಪುತ್ರ ಸಮರ್ಥ ಮಡಿಯಾಲ ಎಸ್‌ಎಸ್‌ಎಲ್‌ಸಿಯಲ್ಲಿ 93% ಅಂಕಗಳನ್ನು ಗಳಿಸಿದ್ದಾರೆ.



**ಕುಮಾರಿ ರಿಶಾ ರವೀಂದ್ರ**

ಶ್ರೀ ರವೀಂದ್ರ ಮತ್ತು ಶ್ರೀಮತಿ ಉಷಾ ದಂಪತಿಯ ಪುತ್ರಿ ಹಾಗೂ ಶ್ರೀ ಎಂ.ಆರ್. ನಾಗರಾಜ ರಾವ್ ಮತ್ತು ಶ್ರೀಮತಿ ಪ್ರಮೋದಿನಿ ಅವರ ಮೊಮ್ಮಗಳು ಕುಮಾರಿ ಕುಮಾರಿ ರಿಶಾ ರವೀಂದ್ರ ಅವರು ಎಸ್‌ಎಸ್‌ಎಲ್‌ಸಿಯಲ್ಲಿ 93% ಅಂಕಗಳನ್ನು ಗಳಿಸಿದ್ದಾರೆ.



**ಮಯೂರ್ ರಾವ್**

ಉಡುಪಿ ಕುಕ್ಕಿಕಟ್ಟೆಯಲ್ಲಿರುವ ಡಾ। ಸುದರ್ಶನ್ ರಾವ್ ಮತ್ತು ಶ್ರೀಮತಿ ವಿದ್ಯಾ ಎಸ್. ರಾವ್ ಅವರ ಪುತ್ರ ಮಯೂರ್ ರಾವ್ ಎಸ್.ಎಸ್.ಎಲ್.ಸಿ.ಯಲ್ಲಿ 92.5% ಅಂಕಗಳಿಸಿ ಉತ್ತೀರ್ಣನಾಗಿರುತ್ತಾನೆ. ಇವನು ಟಿ.ಎಂ.ಎ.ಪೈ. ಸ್ಕೂಲ್ ವಿದ್ಯಾರ್ಥಿಯಾಗಿರುತ್ತಾನೆ.



**ದಿವ್ಯಶ್ರೀ**

ಬೇಕೂರಿನ ಶ್ರೀ ದುರ್ಗಾ ಪ್ರಸಾದ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ಉಬರಳೆ ದಂಪತಿಯ ಪುತ್ರಿ ಕುಮಾರಿ ದಿವ್ಯಶ್ರೀ ಎಸ್‌ಎಸ್‌ಎಲ್‌ಸಿಯಲ್ಲಿ 92% ಅಂಕಗಳಿಸಿದ್ದಾರೆ.



**ಅದ್ವಿತ್**

ಬೆಂಗಳೂರಿನ ಶ್ರೀ ಗುರುಪ್ರಸಾದ್ ಹೆಚ್. ಎಲ್. ಮತ್ತು ಶ್ರೀಮತಿ ವಿನಯಾರವರ ಪುತ್ರ ಅದ್ವಿತ್ ಎಸ್‌ಎಸ್‌ಎಲ್‌ಸಿ ಯಲ್ಲಿ 91.67% ಅಂಕ ಗಳಿಸಿದ್ದಾರೆ.

## ದ್ವಿತೀಯ ಪಿಯುಸಿ ಸಾಧಕರು



**ಪ್ರಾರ್ಥನಾ ಡಿ. ಶಾನುಭಾಗ್**

ಬೆಂಗಳೂರುಶ್ರೀ ಡಿ.ಆರ್. ಶಾನುಭಾಗ್ ಮತ್ತು ಶ್ರೀಮತಿ ಅರ್ಪಣಾ ಡಿ. ಶಾನುಭಾಗ್ ಇವರ ಪುತ್ರಿ ಪ್ರಾರ್ಥನಾ ಡಿ. ಶಾನುಭಾಗ್ ಅವರು ದ್ವಿತೀಯ ಪಿಯುಸಿಯಲ್ಲಿ ಸ್ಕೂಲ್ ಟಾಪರ್ 96% ಅಂಕಗಳಿಸಿದ್ದಾರೆ.



**ಪ್ರಜ್ವಲಿತ ರಾವ್**

ಬೆಂಗಳೂರು ಸಹಕಾರ ನಗರದ ಶ್ರೀ ಕೆ. ಅನಂತಕೃಷ್ಣ ರಾವ್ ಮತ್ತು ಶ್ರೀಮತಿ ಪದ್ಮಾ ದಂಪತಿಗಳ ಪುತ್ರಿ ಕುಮಾರಿ ಪ್ರಜ್ವಲಿತ ರಾವ್ ದ್ವಿತೀಯ ಪಿಯುಸಿಯಲ್ಲಿ 94.2% ಅಂಕಗಳಿಸಿದ್ದಾರೆ. ಹೆಬ್ಬಾಳದ ಸಿಂಧಿ ಸ್ಕೂಲ್‌ನ ವಿದ್ಯಾರ್ಥಿನಿಯಾದ ಈಕೆ ಸ್ಕೂಲ್ ಟಾಪರ್ ಆಗಿದ್ದಾರೆ.



**ಸಮೃದ್ಧಿ ರಾವ್**

ದಿ। ರವಿರಾಜ ವೈ.ಆರ್. ಮತ್ತು ಸೌಮ್ಯಲತಾ ದಂಪತಿಯ ಪುತ್ರಿ ಕುಮಾರಿ ಸಮೃದ್ಧಿ ರಾವ್ ಎಲ್ಲೂರು ದ್ವಿತೀಯ ಪಿಯುಸಿ (ಪಿ.ಸಿ.ಎಂ.ಬಿ.) ಪರೀಕ್ಷೆಯಲ್ಲಿ 94% ಅಂಕಗಳಿಸಿದ್ದಾರೆ. ಇವರು ಉಡುಪಿ ಜ್ಞಾನಸುಧಾ ಕಾಲೇಜಿನ ವಿದ್ಯಾರ್ಥಿನಿ.




**ಸಾಗರ್ ರಾವ್**

ಶ್ರೀ ರವೀಶ ರಾವ್ ಎಂ. (ಮಡಿಯಾಲ) ಮತ್ತು ಶ್ರೀಮತಿ ವೀಣಾ ದಂಪತಿಯ ಪುತ್ರ ಸಾಗರ್ ರಾವ್ ಎಂ. ಬೆಂಗಳೂರಿನ ಆರ್.ವಿ. ಪಿಯು ಕಾಲೇಜು 563/600 (94%) ಗಳಿಸಿದ್ದಾರೆ.



**ಶಮಿತಾ ಎಂ.ಎಸ್.**

ಶ್ರೀ ಶೈಲೇಶ್ ಎಂ.ಎಲ್ (ಮಣಿಕ್ಕಳ) ಮತ್ತು ಶ್ರೀಮತಿ ಸರಸ್ವತಿ ದಂಪತಿಯ ಪುತ್ರಿ ಕುಮಾರಿ ಶಮಿತಾ ಎಂ.ಎಸ್. ಅವರು ಪುತ್ತೂರಿನ ಅಂಬಿಕಾ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ 93% ಗಳಿಸಿದ್ದಾರೆ.



**ಶಾಮ**

ಶ್ರೀ ಸುರೇಶ್ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ದಂಪತಿಯ ಪುತ್ರಿ ಕುಮಾರಿ ಶಾಮ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 92.33% ಗಳಿಸಿದ್ದಾರೆ.




**ಕೃತಿ ಜಿ.ರಾವ್**

ಶ್ರೀ ಗಂಗಾಧರ ರಾವ್ ಮತ್ತು ಶ್ರೀಮತಿ ಕವಿತಾ (ಕುದ್ಕುಳಿ) ಅಡೂರು ದಂಪತಿಯ ಪುತ್ರಿ ಕುಮಾರಿ ಕೃತಿ ಜಿ.ರಾವ್ ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ 92% ಅಂಕ ಪಡೆದಿದ್ದಾರೆ.



**ಸಿದ್ದಾಂತ್ ಜೋಯಿಷಿ**

ಶ್ರೀ ವಿದ್ಯಾಧರ್ ಜೋಯಿಷಿ ಮತ್ತು ಶ್ರೀಮತಿ ಸಲೀಲಾ ದಂಪತಿಯ ಪುತ್ರ ಸಿದ್ಧಾಂತ್ ಜೋಯಿಷಿ ಸಿದ್ಧಾಪುರ (ಕುಂದಾಪುರ) ಎಕ್ಸಲೆಂಟ್ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ 92% ಅಂಕಗಳಿಸಿದ್ದಾರೆ.



**ಸನ್ಮಿತ್**

ಶ್ರೀ ರವಿನಾರಾಯಣ ಸಿ.ಆರ್. (ಚೇನಾಡಿ) ಮತ್ತು ಶ್ರೀಮತಿ ಅನುಪಮಾ ದಂಪತಿಯ ಪುತ್ರ ಸನ್ಮಿತ್ ದ್ವಿತೀಯ ಪಿಯುಸಿ ಪಿ.ಸಿ.ಎಂ.ಸಿ. ಯಲ್ಲಿ ಶೇ.90ರಷ್ಟು ಅಂಕಗಳಿಸಿದ್ದಾರೆ. ಓದಿದ್ದು ಮೈಸೂರಿನ ಎಸ್.ಎ.ಸಿ. ಪಿಯು ಕಾಲೇಜು.



**ಶರಣ್ಯಾ ರಾವ್**

ಶ್ರೀ ಎರ್ಮಾಳು ರಾಜೇಂದ್ರ ರಾವ್ ಮತ್ತು ಶ್ರೀಮತಿ ಅಕ್ಷತಾ ದಂಪತಿಯ ಪುತ್ರಿ ಶರಣ್ಯಾ ರಾವ್ ಅವರು ದ್ವಿತೀಯ ಪಿಯುಸಿಯಲ್ಲಿ 90% ಮತ್ತು ಇತ್ತೀಚೆಗೆ ನಡೆದ ಭರತನಾಟ್ಯ ಸೀನಿಯರ್ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಪಡೆದಿದ್ದಾರೆ.



**ಸಹನಾ ರಾವ್**

ಶ್ರೀ ಮಧುಸೂದನ್ ಕೆ.ಜೆ. ಮತ್ತು ಶ್ರೀಮತಿ ಇಂದಿರಾ ದಂಪತಿಯ ಪುತ್ರಿ ಸಹನಾ ರಾವ್ ಅವರು ದ್ವಿತೀಯ ಪಿಯುಸಿಯಲ್ಲಿ 90% ಗಳಿಸಿದ್ದಾರೆ. ಈಗ ಬೆಂಗಳೂರು ಸ್ಮಾರ್ಟ್ ಸ್ಕೂಲ್ ವಿದ್ಯಾರ್ಥಿನಿ.

# ವಿಶೇಷ ಅಂಚೆ ಲಕೋಟೆ ಬಿಡುಗಡೆ



ಭಾರತೀಯ ಅಂಚೆ ಇಲಾಖೆ ಉಡುಪಿ ವಿಭಾಗದ ವತಿಯಿಂದ 'ಬಾಳಿನ ಗಿಡ' ಖ್ಯಾತಿಯ ಸಾಹಿತಿ ಮಾರ್ಪಳ್ಳಿ ಹರಿದಾಸ ರಾವ್ ಅವರ ಸ್ಮರಣಾರ್ಥ ಹೊರ ತಂದಿರುವ ವಿಶೇಷ ಅಂಚೆ ಲಕೋಟೆ ಬಿಡುಗಡೆ ಸಮಾರಂಭವು ಇತ್ತೀಚೆಗೆ ಉಡುಪಿ ಅಂಚೆ ಪ್ರಧಾನ ಕಛೇರಿಯಲ್ಲಿ ನಡೆಯಿತು. ಉಡುಪಿ ಅಂಚೆ ಅಧೀಕ್ಷಕ ಕೃಷ್ಣರಾಜ ವಿಠಲ ಭಟ್ ಅವರು ವಿಶೇಷ ಅಂಚೆ ಲಕೋಟೆ ಲೋಕಾರ್ಪಣೆಗೊಳಿಸಿ "ಅಂಚೆ ಇಲಾಖೆಯಿಂದ ಅನಾವರಣ ಗೊಳ್ಳುವ ಅಂಚೆ ಚೀಟಿಗಳ ಮೂಲಕ ಸಂಸ್ಕೃತಿ ಅನಾವರಣಕ್ಕೆ ವೇದಿಕೆ ಕಲ್ಪಿಸಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಕಲಿಕೆಗೆ ಬೇಕಾದ ಪೂರಕ ಪತ್ರಗಳನ್ನು ಒದಗಿಸುತ್ತದೆ. ಜನ್ಮಶತಮಾನೋತ್ಸವ ಸಂದರ್ಭ ಮಾರ್ಪಳ್ಳಿ ಹರಿದಾಸ ರಾವ್ ಸ್ಮರಣಾರ್ಥ ವಿಶೇಷ ಅಂಚೆ ಲಕೋಟೆ ಗೌರವದ ಜತೆಗೆ ಸಮಾಜದ ಉಪಯೋಗಕ್ಕೆ ವಿನಿಯೋಗವಾಗಲಿ" ಎಂದು ನುಡಿದರು. ಮಾರ್ಪಳ್ಳಿ ಹರಿದಾಸ ರಾವ್ ಅವರ "ಮೈ ಸ್ಟಾಂಪ್"ನ್ನು ಅವರ ಪುತ್ರ ಡಾ। ರಮಾಕಾಂತ ರಾವ್ ಬಿಡುಗಡೆಗೊಳಿಸಿದರು. ಕಾಂತಾವರ ಕನ್ನಡ ಸಂಘದ "ನಾಡಿಗೆ ನಮಸ್ಕಾರ" ವಿಶೇಷ ಮಾಲಿಕೆಯ ಮಾರ್ಪಳ್ಳಿ ಹರಿದಾಸ ರಾವ್, ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಕುರಿತ ಎರಡು ಪುಸ್ತಕವನ್ನು ಲೇಖಕಿ ಡಾ। ಸರ್ವಮಂಗಳಾ ಅವರು ಬಿಡುಗಡೆ ಗೊಳಿಸಿದರು. ಕವಿಯತ್ರಿ ವಿಜಯಲಕ್ಷ್ಮೀ ನಂದಳಿಕೆ, ಮಾರ್ಪಳ್ಳಿ ನಾಗಪ್ಪಯ್ಯ ಟ್ರಸ್ಟ್ ಅಧ್ಯಕ್ಷ ಎಂ. ಆರ್. ವಾಸುದೇವ ಉಪಸ್ಥಿತ ರಿದ್ದರು. ಉಡುಪಿ ಪ್ರಧಾನ ಅಂಚೆ ಕಛೇರಿಯ ಮುಖ್ಯ ಅಂಚೆ ಪಾಲಕ ಗುರುಪ್ರಸಾದ್ ಸ್ವಾಗತಿಸಿದರು. ಸಹಾಯಕ ಅಂಚೆ ಅಧೀಕ್ಷಕ ವಸಂತ್ ವಂದಿಸಿದರು. ಕಛೇರಿ ಸಹಾಯಕ ಪ್ರಜ್ವಲ್ ಸಹಕರಿಸಿದರು. ಪೂರ್ಣಿಮಾ ಜನಾರ್ದನ್ ನಿರೂಪಿಸಿದರು.



ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಪ್ರದೀಪ್ ಕುಮಾರ್ ಪಿ, ವ್ಯವಸ್ಥಾಪಕ ನಿರ್ದೇಶಕ ಮಹಾಬಲೇಶ್ವರ ಎಂ.ಎಸ್. ಮತ್ತು ವಲಯ ವ್ಯವಸ್ಥಾಪಕ ರಾಜಗೋಪಾಲ್ ಅವರು ತಮ್ಮ ಪ್ರಾದೇಶಿಕ ಕಚೇರಿಯನ್ನು ಹೊಸ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸುವ ಸಂದರ್ಭದಲ್ಲಿ ಸಿ.ಎಸ್. ರಾವ್ ಅವರನ್ನು ಸನ್ಮಾನಿಸಿದರು.



ಉಡುಪಿ ಕುಂಜಿಬೆಟ್ಟು ಉಪೇಂದ್ರ ಪೈ. ಮೆಮೋರಿಯಲ್ ಕಾಲೇಜಿನಲ್ಲಿ ತಾ.29.04.2023ರಂದು ಜರಗಿದ ರಕ್ತದಾನ ಶಿಬಿರವನ್ನು ಫ್ರೆಂಡ್ಸ್ ಗ್ರೂಪ್ ಉಡುಪಿ ಇದರ ಗೌರವಾಧ್ಯಕ್ಷರಾದ ಶ್ರೀ ವಸಂತ ರಾವ್ ಕರಂಬಳ್ಳಿಯವರು ದೀಪ ಬೆಳಗಿಸಿ ಉದ್ಘಾಟಿಸಿದರು.



ಶ್ರೀ ಶಾರದಾ ಮಂಟಪದ ಮುಖ್ಯ ಸಭಾಂಗಣದ ಎ.ಸಿ ಅಳವಡಿಕೆಗೆ ನಮ್ಮ ಸಂಘದ ನಿರ್ದೇಶಕರಾದ ಪಿ. ಸತೀಶ್ ರಾವ್ ಇವರು ರೂ.1 ಲಕ್ಷ ದೇಣಿಗೆ ನೀಡಿರುತ್ತಾರೆ. ಈ ಸಂದರ್ಭ ಅವರ ಪತ್ನಿ ಶ್ರೀಮತಿ ಸುಕನ್ಯಾ ಹಾಗೂ ತಾಯಿ ನಾಗವೇಣಿಯಮ್ಮ, ಸಂಘದ ಕಾರ್ಯದರ್ಶಿ ಪಿ. ಪ್ರಭಾಕರ ಭಂಡಿ ಜೊತೆ ಕಾರ್ಯದರ್ಶಿ ವಿನೋದ್ ಕುಮಾರ್ ಉಪಸ್ಥಿತರಿದ್ದರು.




ಶ್ರೀ ಶಾರದಾ ಮಂಟಪದ ಮುಖ್ಯ ಸಭಾಂಗಣದ ಎ.ಸಿ ಅಳವಡಿಕೆಗೆ ಉಡುಪಿ ಬೈಲೂರಿನ ಗೀತಾ ಸದಾಶಿವ ರಾವ್ ರೂ.1 ಲಕ್ಷ ದೇಣಿಗೆ ನೀಡಿರುತ್ತಾರೆ. ಈ ಸಂದರ್ಭ ಸಂಘದ ಪದಾಧಿಕಾರಿಗಳಾದ ಕೆ. ಮಂಜುನಾಥ ಹೆಬ್ಬಾರ್, ಗಣೇಶ್ ಹೆಬ್ಬಾರ್, ಪ್ರಭಾಕರ ಭಂಡಿ, ಯು. ಅರವಿಂದ ಕುಮಾರ್, ಜಯರಾಮ ರಾವ್ ಹಾಗೂ ಶ್ರೀ ಶಾರದಾ ಮಂಟಪದ ಮೆನೇಜರ್ ಅಜಿತ್ ರಾವ್ ಮತ್ತು ಅವರ ಮನೆಯವರು ಉಪಸ್ಥಿತರಿದ್ದರು.

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ ಇದರ ಸಂಘದ ನಿರ್ದೇಶಕರು, ನಗರಸಭಾ ಸದಸ್ಯರಾದ ಶ್ರೀಮತಿ ರಜನಿ ಹೆಬ್ಬಾರ್ ಪ್ರಧಾನಿ ನರೇಂದ್ರ ಮೋದಿಯವರಿಗೆ ಉಡುಪಿಯಲ್ಲಿ ಸ್ವಾಗತ ನೀಡಿದ ಸಂದರ್ಭ.

With Best Compliments From :
BUILDING DREAMS, ENHANCING LIVES.



Land® Trades
BUILDERS & DEVELOPERS
BUILDING TRUST, DELIVERING VALUE
NAKSHATRA — GANDHINAGAR —
SOLITAIRE — HATHILL, —
HABITAT ONE 54 — DEREBAIL —
ANANTESSH — CAR STREET, —
MANGALURU'S LEADING REAL ESTATE COMPANY
RESIDENTIAL | COMMERCIAL | PLOTS
For More Details : 8882 777 444 | 0824 2425424, 2423866 | www.landtrades.in
Follow us on :

SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar